"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

# ಕರ್ನಾಟಕ ವಿಧಾನ ಪರಿಷತ್ತು

6ನೇ ಫೆಬ್ರವರಿ 2019
ಬುಧವಾರ

## ವಿಷಯಾನುಕ್ರಮಣಿಕೆ

1. **ಉಭಯ ಸದನಗಳನ್ನುದ್ದೇಶಿಸಿ ಘನತೆವೆತ್ತ ರಾಜ್ಯಪಾಲರು ಮಾಡಿದ ಭಾಷಣದ ಪ್ರತಿಗಳ ಮಂಡನೆ.**

2. **ನೂತನ ಸದಸ್ಯರ ಪರಿಚಯ**

3. **ಪ್ರಕಟಣೆಗಳು.**

4. **ಸಂತಾಪ ಸೂಚನೆಗಳು.**

ಕರ್ನಾಟಕ ರತ್ನ ಡಾ॥ ಶ್ರೀ ಶಿವಕುಮಾರ ಸ್ವಾಮೀಜಿಗಳು, ಕೇಂದ್ರದ ಮಾಜಿ ಸಚಿವರು, ಸಮಾಜವಾದಿ ಮತ್ತು ಕಾರ್ಮಿಕ ನಾಯಕರಾದ ಜಾರ್ಜ್ ಫರ್ನಾಂಡಿಸ್ ಹಾಗೂ ಕನ್ನಡ ಚಲನಚಿತ್ರ ರಂಗ ಮತ್ತು ರಂಗಭೂಮಿಯ ಹಿರಿಯ ನಟ ಲೋಕನಾಥ್ ಇವರುಗಳ ನಿಧನದ ಬಗ್ಗೆ.

–ಡಾ॥ ಜಯಮಾಲ(ಸಭಾನಾಯಕರು)
–ಶ್ರೀ ಕೋಟ ಶ್ರೀನಿವಾಸ ಪೂಜಾರಿ

<><><>

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**“ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”**

(001) 11.40 06.02.2019 ವೈಎಲ್-ಎಂಡಿ

**_ಕರ್ನಾಟಕ ವಿಧಾನ ಪರಿಷತ್ತು_**

**ಬುಧವಾರ 06ನೇ ಫೆಬ್ರವರಿ 2019**

ಸದನವು ವಿಧಾನ ಪರಿಷತ್ತಿನ ಸಭಾಂಗಣದಲ್ಲಿ

ಪೂರ್ವಾಹ್ನ **11** ಗಂಟೆ **46** ನಿಮಿಷಕ್ಕೆ ಸಮಾವೇಶಗೊಂಡಿತು

ಸಭಾಪತಿ (ಶ್ರೀ **ಕೆ.ಪ್ರತಾಪಚಂದ್ರ ಶೆಟ್ಟಿ**) ಯವರು

ಪೀಠದಲ್ಲಿ ಉಪಸ್ಥಿತರಿದ್ದರು.

**ಸದನವು “ವಂದೇ ಮಾತರಂ” ಗೀತೆಯೊಂದಿಗೆ ಸಮಾವೇಶಗೊಂಡಿತು.**

(002)/06.02.209/11.50/ಎಸ್‌ಕೆ-ಎಕೆ

(ಸಭಾಪತಿಯವರ ಉಪಸ್ಥಿತಿ)

**ಸಭಾಪತಿಯವರು:-** ಮಾನ್ಯ ಕಾರ್ಯದರ್ಶಿಯವರು ಘನತೆವೆತ್ತ ರಾಜ್ಯಪಾಲರು ಉಭಯ ಸದನಗಳ ಸದಸ್ಯರನ್ನುದ್ದೇಶಿಸಿ ಮಾಡಿದ ಭಾಷಣದ ಪ್ರತಿಯನ್ನು ಸದನದ ಮುಂದೆ ಮಂಡಿಸಬೇಕು.

**1. <u>ಉಭಯ ಸದನಗಳನ್ನುದ್ದೇಶಿಸಿ ಘನತೆವೆತ್ತ ರಾಜ್ಯಪಾಲರು ಮಾಡಿದ ಭಾಷಣದ ಪ್ರತಿಗಳ ಮಂಡನೆ</u>**

**ಕಾರ್ಯದರ್ಶಿ, ಕ.ವಿ.ಪ.:-** ಮಾನ್ಯ ಸಭಾಪತಿಯವರೇ, ಘನತೆವೆತ್ತ ರಾಜ್ಯಪಾಲರು ಉಭಯ ಸದನಗಳ ಸದಸ್ಯರನ್ನುದ್ದೇಶಿಸಿ ಮಾಡಿದ ಭಾಷಣದ ಪ್ರತಿಯನ್ನು ಸದನದ ಮುಂದೆ ಮಂಡಿಸುತ್ತಿದ್ದೇನೆ.

**(ಭಾಷಣದ ಕನ್ನಡ, ಆಂಗ್ಲ ಹಾಗೂ ಹಿಂದಿ ಪ್ರತಿಯನ್ನು ಲಗತ್ತಿಸಿದೆ.)**

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## 2. ನೂತನ ಸದಸ್ಯರ ಪರಿಚಯ

**ಸಭಾಪತಿಯವರು:–** ವಿಧಾನ ಪರಿಷತ್ತಿಗೆ ನಾಮನಿರ್ದೇಶನಗೊಂಡಿರುವಂತಹ ಶ್ರೀ ಕೆ.ಎ. ತಿಪ್ಪೇಸ್ವಾಮಿಯವರನ್ನು ಸದನಕ್ಕೆ ಪರಿಚಯಿಸುತ್ತಿದ್ದೇನೆ. ಈಗ ಪ್ರಕಟಣೆ ಇದೆ.

**ಶ್ರೀ ಎಸ್ ನಾಗರಾಜ್ (ಸಂದೇಶ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**ಮಾನ್ಯ ಸಭಾಪತಿಯವರೇ, ವಿಧಾನಸಭೆಯಲ್ಲಿ ಜಂಟಿ ಅಧಿವೇಶನ ವೇಳೆ ರಾಜ್ಯಪಾಲರ ಭಾಷಣದ ಪುಸ್ತಕಕ್ಕೆ ರ್‍ಯಾಪರ್ ಹಾಕಿರುವ ಪ್ರತಿಯನ್ನು ಒದಗಿಸಿರುತ್ತಾರೆ. ಆದರೆ ವಿಧಾನ ಪರಿಷತ್ತಿನಲ್ಲಿ ಸರಳವಾಗಿರುವ ಪುಸ್ತಕದ ಪ್ರತಿಯನ್ನು ನೀಡಿರುತ್ತೀರಿ.

**ಶ್ರೀ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಜಂಟಿ ಅಧಿವೇಶನ ವೇಳೆ ವಿಧಾನಸಭೆಯಲ್ಲಿ ನೀಡಿರುವ ಭಾಷಣದ ಪ್ರತಿಗೂ, ಇಲ್ಲಿ ನೀಡಿರುವ ಭಾಷಣದ ಪ್ರತಿಗೂ ವ್ಯತ್ಯಾಸವಿದೆ.

**ಶ್ರೀ ಟಿ.ಎ. ಶರವಣ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಈ ರೀತಿ ಏಕೆ ಮಾಡುತ್ತಾರೆಂಬುದು ಗೊತ್ತಾಗುತ್ತಿಲ್ಲ. ನಾವು ಕೇಳುವಂಥದ್ದು ...

**(ಈ ಹಂತದಲ್ಲಿ ವಿರೋಧ ಪಕ್ಷದ ಕೆಲವು ಸದಸ್ಯರುಗಳು ವಿಧಾನಮಂಡಲದ ಜಂಟಿ ಅಧಿವೇಶನದಲ್ಲಿ ಸದಸ್ಯರುಗಳಿಗೆ ಒದಗಿಸಲಾದ ಘನತೆವೆತ್ತ ರಾಜ್ಯಪಾಲರ ಭಾಷಣದ ರ್‍ಯಾಪರ್ ಹೊಂದಿರುವ ಪುಸ್ತಕಗಳು ಹಾಗೂ ವಿಧಾನ ಪರಿಷತ್ತಿನಲ್ಲಿ ಒದಗಿಸಲಾದ ರ್‍ಯಾಪರ್ ಹೊಂದಿರದ ಸಾಧಾರಣ ಪುಸ್ತಕಗಳನ್ನು ಸದನದಲ್ಲಿ ಪ್ರದರ್ಶಿಸಿದರು)**

**(ಗೊಂದಲ)**

**ಸಭಾಪತಿಯವರು:–** ತಮಗೆ ವಿಧಾನಸಭೆಯಲ್ಲಿ ರಾಜ್ಯಪಾಲರ ಭಾಷಣದ ಪುಸ್ತಕದ ಪ್ರತಿಯನ್ನು ಕೊಟ್ಟಿಲ್ಲವೇ?

## 3. ಪ್ರಕಟಣೆಗಳು

**ಸಭಾಪತಿಯವರು:–** ಅ) ವಿಧಾನ ಪರಿಷತ್ತಿನ 137 ನೇ ಅಧಿವೇಶನವು ದಿನಾಂಕ: 06.02.2019ರಂದು ಪ್ರಾರಂಭವಾಗುತ್ತಿದ್ದು, ಸದನದ ಕಾರ್ಯಕಲಾಪಗಳನ್ನು ಪ್ರಾಯೋಗಿಕವಾಗಿ webcast.gov.in/karcouncil ಮತ್ತು webcast.gov.in/karassembly

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಂತರ್ಜಾಲ ತಾಣಗಳಲ್ಲಿ ಎನ್‌ಐಸಿ ವತಿಯಿಂದ ನೇರವಾಗಿ ಪ್ರಸಾರ ಮಾಡಲಾಗುವುದು ಎಂದು ಈ ಮೂಲಕ ತಿಳಿಸಲಾಗುತ್ತಿದೆ.

ಆ) ವಿಧಾನ ಪರಿಷತ್ತಿನ 137ನೇ ಅಧಿವೇಶನದಲ್ಲಿ ಮಾನ್ಯ ಸದಸ್ಯರುಗಳು ಸಕ್ರಿಯವಾಗಿ ಪಾಲ್ಗೊಳ್ಳಲು ಅನುಕೂಲವಾಗುವಂತೆ ಪ್ರಚಲಿತ ವಿಆದ್ಯಾಮಾನಗಳನ್ನು ಅಂತರ್ಜಾಲ ತಾಣಗಳನ್ನು ಪಡೆದುಕೊಳ್ಳಲು ಅನುಕೂಲವಾಗುವಂತೆ ವಿಧಾನ ಪರಿಷತ್ತಿನ ಪ್ರಾಂಗಣದಲ್ಲಿ ಗಣಕಯಂತ್ರಗಳನ್ನು ಮಾನ್ಯ ಸದಸ್ಯರ ಉಪಯೋಗಕ್ಕೆ ಮಾತ್ರ ಅಳವಡಿಸಲಾಗಿರುತ್ತದೆ. ಇದರ ಉಪಯೋಗವನ್ನು ಮಾನ್ಯ ಸದಸ್ಯರು ಪಡೆದುಕೊಳ್ಳಬಹುದಾಗಿದೆ.

ಇ) ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮ 227ರ ಮೇರೆಗೆ 137ನೇ ಅಧಿವೇಶನದ ಕಾರ್ಯಕಲಾಪಗಳ ಸಲಹಾ ಸಮಿತಿಯನ್ನು ಈ ಮುಂದಿನಂತೆ ರಚಿಸಲಾಗಿರುತ್ತದೆ.

1. ಶ್ರೀ ಎಸ್.ಎಲ್. ಧರ್ಮೇಗೌಡ, ಮಾನ್ಯ ಉಪ ಸಭಾಪತಿಯವರು
2. ಡಾ. ಜಯಮಾಲ, ಮಾನ್ಯ ಸಭಾ ನಾಯಕರು ಹಾಗೂ ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನ ಮತ್ತು ಹಿರಿಯ ನಾಗರೀಕರ ಸಬಲೀಕರಣ ಸಚಿವರು
3. ಶ್ರೀ ಕೋಟ ಶ್ರೀನಿವಾಸ ಪೂಜಾರಿ, ಮಾನ್ಯ ವಿರೋಧ ಪಕ್ಷದ ನಾಯಕರು
4. ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ, ವಿಧಾನ ಪರಿಷತ್ತಿನ ಮಾನ್ಯ ವಿರೋಧ ಪಕ್ಷದ ಮುಖ್ಯ ಸಚೇತಕರು
5. ಶ್ರೀ ವೈ.ಎ. ನಾರಾಯಣಸ್ವಾಮಿ, ವಿಧಾನ ಪರಿಷತ್ತಿನ ಸದಸ್ಯರು ಹಾಗೂ ಮಾನ್ಯ ವಿರೋಧ ಪಕ್ಷದ ಉಪ ನಾಯಕರು.
6. ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ, ವಿಧಾನ ಪರಿಷತ್ತಿನ ಸದಸ್ಯರು.
7. ಶ್ರೀ ಎಸ್.ಆರ್. ಪಾಟೀಲ್, ವಿಧಾನ ಪರಿಷತ್ತಿನ ಸದಸ್ಯರು.
8. ಶ್ರೀ ಆಯನೂರು ಮಂಜುನಾಥ್, ವಿಧಾನ ಪರಿಷತ್ತಿನ ಸದಸ್ಯರು.
9. ಶ್ರೀ ಹೆಚ್.ಡಿ. ಕುಮಾರಸ್ವಾಮಿ, ಮಾನ್ಯ ಮುಖ್ಯಮಂತ್ರಿಗಳು, ವಿಶೇಷ ಆಹ್ವಾನಿತರು.
10. ಡಾ. ಜಿ. ಪರಮೇಶ್ವರ್, ಮಾನ್ಯ ಉಪ ಮುಖ್ಯಮಂತ್ರಿಗಳು, ಬೆಂಗಳೂರು ಅಭಿವೃದ್ಧಿ ನಗರ ಯೋಜನೆ, ಕಾನೂನು ಮತ್ತು ಸಂಸದೀಯ ವ್ಯವಹಾರಗಳು (ಐಟಿ-ಬಿಟಿ) ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು, ವಿಶೇಷ ಆಹ್ವಾನಿತರು.

**ಸಭಾಪತಿಯವರು:-** ಈಗ ಸಂತಾಪ ಸೂಚನೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್ ನಾಗರಾಜ್ (ಸಂದೇಶ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ರಾಜ್ಯಪಾಲರ ಭಾಷಣದ ಪ್ರತಿಯ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ತಾವು ಅದರ ಬಗ್ಗೆ ಏನು ಹೇಳುವುದಿಲ್ಲ.

**ಸಭಾಪತಿಯವರು:-** ಜಂಟಿ ಅಧಿವೇಶನದಲ್ಲಿ ಎಲ್ಲರಿಗೂ ರಾಜ್ಯಪಾಲರ ಭಾಷಣದ ಪುಸ್ತಕಗಳನ್ನು ವಿತರಣೆ ಮಾಡಲಾಗಿದೆ. ಎಲ್ಲರಿಗೂ ಈ ಪುಸ್ತಕಗಳನ್ನು ವಿತರಣೆ ಮಾಡಲಿಲ್ಲವೇ?

**ಶ್ರೀ ಎಸ್ ನಾಗರಾಜ್ (ಸಂದೇಶ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-**ಮಾನ್ಯ ಸಭಾಪತಿಯವರೇ, ಆದರೆ ಇಲ್ಲಿ ಪುಸ್ತಕಗಳನ್ನು ವಿತರಣೆ ಮಾಡುವುದು ಬೇಡ ಬಿಡಿ. ಇಲ್ಲಿ ಏಕೆ ವಿತರಣೆ ಮಾಡಬೇಕು?

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕೆಳಮನೆಯಲ್ಲಿ ಮಂಡನೆ ಮಾಡಿದ ಮೇಲೆ, ನಾವು ಏತಕ್ಕೆ ಈ ಮೇಲ್ಮನೆಯಲ್ಲಿ ಮಂಡನೆ ಮಾಡಬೇಕು. ಈ ಮೇಲ್ಮನೆಗೆ ತನ್ನದೇ ಆದಂತಹ ಒಂದು ಗೌರವ ಇದೆ. ಕೆಳಗಿನ ಮನೆಯಲ್ಲಿ ಮಂಡನೆ ಮಾಡಿದರೆ, ಮೇಲ್ಮನೆಯಲ್ಲಿ ಮಾಡಬಾರದೆ, ಇದು ಮೇಲ್ನೋಟಕ್ಕೆ ತಾರತಮ್ಯವಿದೆ ಎಂಬುದು ಗೊತ್ತಾಗುತ್ತದೆ. ಇದು ಒಂದಿಷ್ಟು ಸಣ್ಣ ಸಣ್ಣ ಸಂಗತಿಗಳಾದರೂ ಬಹಳಷ್ಟು ದೊಡ್ಡ ಸಂದೇಶಗಳಾಗಿ ಹೋಗುತ್ತವೆ. ಸರ್ಕಾರ ಇದನ್ನು ಸರಿಪಡಿಸಿಕೊಳ್ಳಬೇಕು ಮತ್ತು ಈ ಮೇಲ್ಮನೆಗೆ ಅಗೌರವ ಆಗುವಂತಹ ಸಂದರ್ಭ ನಿರ್ಮಾಣ ಆಗಬಾರದೆಂಬುದು ನಮ್ಮ ಕಳಕಳಿಯಾಗಿದೆ. ಅದನ್ನು ಬಿಟ್ಟರೆ ಬೇರೆ ಏನೂ ಇಲ್ಲ.

**ಶ್ರೀ ಐವನ್ ಡಿ'ಸೋಜಾ (ನಾಮ ನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಈ ಹಿಂದೆ ಇದ್ದಂತಹ ಸರ್ಕಾರದಲ್ಲಿಯೂ ಇದೇ ಇತ್ತು.

**(ಗೊಂದಲ)**

**ಶ್ರೀ ಎಂ. ಕೆ. ಪ್ರಾಣೇಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-**ಮಾನ್ಯ ಸಭಾಪತಿಯವರೇ, ಇದನ್ನು ಬದಲಾವಣೆ ಮಾಡಿ ಎಂದು ಕೇಳುತ್ತಿದ್ದೇವೆ. ರಾಜಕಾರಣ ಮಾಡುವುದು ಬೇಡ.

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ (ನಾಮ ನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಎಲ್ಲಾ ಸರ್ಕಾರದಲ್ಲಿಯೂ ಇದೇ ರೀತಿ ಇದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ವಿರೋಧ ಪಕ್ಷದ ನಾಯಕರು):–**ಮಾನ್ಯ ಸಭಾಪತಿಯವರೇ, ಕೆಳಮನೆಯಲ್ಲಿ ರಾಜ್ಯಪಾಲರ ಭಾಷಣದ ಪ್ರತಿಯನ್ನು ರ‍್ಯಾಪರ್ ಹಾಕಿ, ನಮಗೆಲ್ಲಾ ತಲುಪಿಸಿದ್ದಾರೆ. ಆದರೆ ಮೇಲ್ಮನೆಯಲ್ಲಿ ಮಂಡಿಸುವಾಗ ಅದರ ರ‍್ಯಾಪರ್ ಇಲ್ಲದೇ ಇರುವಂಥದ್ದು, ಸಾಮಾನ್ಯವಾಗಿ ಪ್ರಿಂಟ್ ಮಾಡಲಾದುದನ್ನು ಕೊಡಲಾಗಿದೆ ಎಂದು ಹೇಳುತ್ತಿದ್ದಾರೆ. ಆದರೆ ತಾವು ಅದನ್ನು ವಿತರಿಸಿರುವುದರ ಬಗ್ಗೆ ನಮ್ಮ ವಾದವಿಲ್ಲ. ಆದರೆ ಕೆಳಮನೆಯಲ್ಲಿ ಒಂದು ರೀತಿ ಮತ್ತು ಮೇಲ್ಮನೆಯಲ್ಲಿ ಒಂದು ರೀತಿ ಮಾಡುವುದು ಸರಿ ಎನಿಸುವುದಿಲ್ಲ. ಆದ್ದರಿಂದ ದಯವಿಟ್ಟು, ಮುಂದೆ ಈ ರೀತಿಯಾಗದಂತೆ ನೋಡಿಕೊಳ್ಳಿ ಎಂಬುದು ನಮ್ಮ ಕಳಕಳಿಯಾಗಿದೆ.

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೇ, ವಿಧಾನಸಭೆ ಸಭಾಂಗಣದಲ್ಲಿ ನಡೆದ ಜಂಟಿ ಅಧಿವೇಶನ ವೇಳೆ ಸಾಮಾನ್ಯವಾಗಿ ಎಲ್ಲಾ ಮಾನ್ಯ ಸದಸ್ಯರಿಗೂ ಕೊಟ್ಟಿದ್ದಾರೆ. ಆದರೆ ಕೆಲವು ಸದಸ್ಯರಿಗೆ ಅದು ಸಿಗದೇ ಇರಬಹುದು. ಎರಡನೇ ಪುಸ್ತಕ ಪಡೆಯುವಂತಹ ಸಂದರ್ಭದಲ್ಲಿ ಈ ಬಜೆಟ್‌ನಲ್ಲಿಯೇ ಆಗಲೀ ಅಥವಾ ಯಾವುದೇ ಬಜೆಟ್‌ನಲ್ಲಿಯೇ ಆಗಲಿ, ಸರಳವಾಗಿ ಪ್ರಿಂಟ್ ಆಗಿರುವ ಪುಸ್ತಕವನ್ನು ಕೊಡುತ್ತಾರೆ. ಇದೇ ನಡೆದುಕೊಂಡು ಬಂದಿರುವಂತಹ ಪದ್ಧತಿ. ಮಾನ್ಯ ಬಸವರಾಜ ಹೊರಟ್ಟಿಯವರೇ ಮಾತನಾಡಿ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಇದನ್ನು ಕೊಡುವ ಅವಶ್ಯಕತೆ ಇರಲಿಲ್ಲ. ಇದಕ್ಕೆ ಒಂದು ನಿರ್ದೇಶನವನ್ನು ಕೊಡಿ. ಕೆಳಮನೆ ಮತ್ತು ಮೇಲ್ಮನೆಯಲ್ಲಿ discrimination ಇರಬಾರದು. ಮುಂದಿನ ಬಾರಿ ಕೆಳಮನೆಯಲ್ಲಿ ಯಾವ ರೀತಿ ಪ್ರಿಂಟ್ ಹಾಕಿಸಿ, ಪುಸ್ತಕವನ್ನು ಕೊಡುತ್ತಾರೋ ಅದೇ ರೀತಿ ಮೇಲ್ಮನೆಯಲ್ಲೂ ಕೊಡಲಿ.

ಸಭಾಪತಿಯವರು:– ಸರಿ. ಈಗ ಸಂತಾಪ ಸೂಚನೆಯನ್ನು ತೆಗೆದುಕೊಳ್ಳೋಣ.

(ಮುಂದು...)

(03)06.02.2018,12.00,ಟಿಸಿಹೆಚ್–ಎಕೆ, **(ಸಭಾಪತಿಯವರ ಉಪಸ್ಥಿತಿ)**

**4. ಸಂತಾಪ ಸೂಚನೆಗಳು**

**ವಿಷಯ:–** ಕರ್ನಾಟಕ ರತ್ನ ಡಾ॥ ಶ್ರೀ ಶಿವಕುಮಾರ ಸ್ವಾಮೀಜಿಗಳು, ಕೇಂದ್ರದ ಮಾಜಿ ಸಚಿವರು,ಸಮಾಜವಾದಿ ಮತ್ತು ಕಾರ್ಮಿಕ ನಾಯಕರಾದ ಜಾರ್ಜ್

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಫರ್ನಾಂಡಿಸ್ ಹಾಗೂ ಕನ್ನಡ ಚಲನಚಿತ್ರ ರಂಗ ಮತ್ತು ರಂಗಭೂಮಿಯ ಹಿರಿಯ ನಟ ಲೋಕನಾಥ್ ಇವರುಗಳ ನಿಧನದ ಬಗ್ಗೆ.

-----

**ಸಭಾಪತಿಯವರು:-** ನಡೆದಾಡುವ ದೇವರು ತ್ರಿವಿಧ ದಾಸೋಹಿ, ಕರ್ನಾಟಕ ರತ್ನ ಡಾ॥ ಶ್ರೀ ಶಿವಕುಮಾರ ಸ್ವಾಮೀಜಿಗಳು, ಕೇಂದ್ರದ ಮಾಜಿ ಸಚಿವರು, ಸಮಾಜವಾದಿ ಮತ್ತು ಕಾರ್ಮಿಕ ನಾಯಕರಾದ ಜಾರ್ಜ್ ಫರ್ನಾಂಡಿಸ್ ಹಾಗೂ ಕನ್ನಡ ಚಲನಚಿತ್ರ ರಂಗ ಮತ್ತು ರಂಗಭೂಮಿಯ ಹಿರಿಯ ನಟ ಲೋಕನಾಥ್ ಅವರುಗಳು ನಿಧನರಾದುದನ್ನು ಈ ಸದನಕ್ಕೆ ತಿಳಿಸಲು ವಿಷಾಧಿಸುತ್ತೇನೆ.

**1. ಡಾ॥ ಶ್ರೀ ಶಿವಕುಮಾರ ಸ್ವಾಮೀಜಿ**

**ನಡೆದಾಡುವ ದೇವರು, ತ್ರಿವಿಧ ದಾಸೋಹಿ, ಕಾಯಕ ಯೋಗಿ ಶತಾಯುಷಿ ಡಾ॥ ಶ್ರೀ ಶಿವಕುಮಾರ ಸ್ವಾಮೀಜಿರವರು ದಿನಾಂಕ 21.01.2019 ರಂದು ನಿಧನ ಹೊಂದಿರುತ್ತಾರೆ.**

1907 ಏಪ್ರಿಲ್ 01 ರಂದು ಮಾಗಡಿ ತಾಲ್ಲೂಕಿನ ವೀರಾಪುರ ಗ್ರಾಮದಲ್ಲಿ ಹೊನ್ನೇಗೌಡ-ಗಂಗಮ್ಮ ದಂಪತಿಯ 13ನೇ ಪುತ್ರರಾಗಿ ಜನಿಸಿದ್ದ ಶ್ರೀಯುತರು, ವೀರಾಪುರದಲ್ಲಿಯೇ ಇದ್ದು, ಕೂಲಿಮಠದಲ್ಲಿ ಮರಳಿನ ಮೇಲೆ ಅಕ್ಷರ ತಿದ್ದುವ ಮೂಲಕ ಶೈಕ್ಷಣಿಕ ಜೀವನವನ್ನು ಆರಂಭಿಸಿದರು. ತುಮಕೂರಿನ ಸರ್ಕಾರಿ ಪ್ರೌಢಶಾಲೆಯಲ್ಲಿ ಮೆಟ್ರಿಕ್ಯುಲೇಷನ್ ಮುಗಿಸಿ ಬೆಂಗಳೂರಿನ ರಾವ್ ಬಹದ್ದೂರ್ ಧರ್ಮಪ್ರವರ್ತ ಶ್ರೀ ಗುಬ್ಬಿ ತೋಟದಪ್ಪ ಧರ್ಮ ಛತ್ರದಲ್ಲಿ ಉಳಿದುಕೊಂಡು ಸೆಂಟ್ರಲ್ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡಿದ್ದರು. ವಿದ್ಯಾಭ್ಯಾಸದ ಜೊತೆ ಜೊತೆಗೆ ಶ್ರೀ ಸಿದ್ದಗಂಗಾ ಮಠದ ಒಡನಾಟವಿಟ್ಟುಕೊಂಡಿದ್ದರು. ಮಠದ ಅಂದಿನ ಪೀಠಾಧಿಪತಿಗಳಾಗಿದ್ದ ಶ್ರೀ ಉದ್ದಾನ ಸ್ವಾಮೀಜಿ ಹಾಗೂ ಕಿರಿಯ ಶ್ರೀಗಳಾಗಿದ್ದ ಮರುಳಾರಾಧ್ಯರ ಒಡನಾಟವು ಇವರಿಗೆ ದೊರಕಿತ್ತು. 1930ರಲ್ಲಿ ಕಿರಿಯ ಶ್ರೀಗಳಾಗಿದ್ದ ಶ್ರೀ ಮರುಳಾರಾಧ್ಯರು ಆಕಸ್ಮಿಕವಾಗಿ ಶಿವೈಕ್ಯರಾದ ಸಂದರ್ಭದಲ್ಲಿ ಅವರ ಕ್ರಿಯಾ ಸಮಾಧಿ ಕಾರ್ಯಕ್ಕೆ ತೆರಳಿದ ಶ್ರೀಗಳನ್ನು ಶ್ರೀ ಉದ್ದಾನ ಸ್ವಾಮೀಜಿಯವರು ಮಠದ ಉತ್ತರಾಧಿಕಾರಿಯಾಗಿ ನೇಮಕ ಮಾಡಿದರು. ತದನಂತರ ಶ್ರೀ ಉದ್ದಾನ ಸ್ವಾಮೀಜಿಯವರು 1941ರಲ್ಲಿ ಶಿವೈಕ್ಯರಾದ ನಂತರ, 1941 ಜನವರಿ, 11ರಂದು ಶ್ರೀ ಸಿದ್ದಗಂಗಾ ಮಠದ ಪೀಠಾಧಿಪತಿಯಾಗಿ ಅಧಿಕಾರ ಸ್ವೀಕಾರ ಮಾಡಿದರು.

ಬಡ-ಮಧ್ಯಮ ವರ್ಗದ ಜನತೆಗೆ ಶಿಕ್ಷಣ ಅಲಭ್ಯವಾಗಿದ್ದಾಗ ಸ್ವಾತಂತ್ರ್ಯ ಪೂರ್ವದಲ್ಲಿಯೇ ಶಿಕ್ಷಣದ ಮಹತ್ವವನ್ನು ಅರಿತು, ಅದನ್ನು ಕಾರ್ಯಗತಗೊಳಿಸಿದ್ದು ಶ್ರೀಗಳ ಅಪೂರ್ವ ದೂರದೃಷ್ಟಿಯ ಕಾರ್ಯವಾಗಿತ್ತು. ಸುಮಾರು 125ಕ್ಕೂ ಹೆಚ್ಚು ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ ಮುನ್ನೆಡಿಸಿದ ಶ್ರೀಗಳು,

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಾಡಿನೆಲ್ಲೆಡೆಯಿಂದ ಬರುವ ಸಾವಿರಾರು ನಿರ್ಗತಿಕ ಹಾಗೂ ಬಡ ಮಕ್ಕಳಿಗೆ ಅಕ್ಷರ, ಅನ್ನ ಹಾಗೂ ಆಶ್ರಯ ನೀಡಿ ಅವರ ಬದುಕನ್ನು ಕಟ್ಟಿಕೊಟ್ಟು ಮಠದ ಹೆಸರಿಗೆ ಮೆರಗು ತಂದವರು. ಲೋಕೋಪಕಾರಕ್ಕಾಗಿಯೇ ಜನ್ಮ ತಳೆದ ಶ್ರೀಗಳು ತಮ್ಮ ನಿಷ್ಕಾಮ ಸೇವೆಯ ಮೂಲಕ 'ಆಧುನಿಕ ಬಸವಣ್ಣ' ಎನಿಸಿದ್ದರು. ಶ್ರೀಗಳ ಅಪರಿಮಿತ ಕಾಯಕ, ನಿಷ್ಠೆ ಹಾಗೂ ತ್ರಿವಿಧ ದಾಸೋಹಗಳಿಂದ ಸಿದ್ದಗಂಗಾ ಮಠವು ಪುನೀತವಾಗಿದೆ. ಅನ್ನದ ಹಸಿವು, ಜ್ಞಾನದ ಹಸಿವನ್ನು ಇಟ್ಟುಕೊಂಡು ಬಂದವರಿಗೆ ಜಾತಿ, ಮತ ಮತ್ತು ಪ್ರಾಂತ್ಯದ ಬೇಧವೆನಿಸದೆ ಮಾತೃವಾತ್ಸಲ್ಯದ ಆಶ್ರಯ ನೀಡಿ ಲಕ್ಷಾಂತರ ಪ್ರತಿಭೆಗಳನ್ನು ಪೋಷಿಸಿ, ಸಮಾಜಕ್ಕೆ ಧಾರೆಯೆರೆದ ಮಾಹಾ ತಪಸ್ವಿಗಳು. ಅನ್ನದಾನ, ವಿದ್ಯಾದಾನದ ಸೇವೆಯನ್ನು ನೂರು ವರ್ಷಗಳ ಕಾಲ ಅನೂಚಾನವಾಗಿ ಮಾಡಿಕೊಂಡು ಬಂದಿರುವುದು ಮನುಷ್ಯ ಮಾತ್ರರಿಂದ ಸಾಧ್ಯವಾಗುವಂಥದ್ದಲ್ಲ. ಧರ್ಮೋತ್ಥಾನದಿಂದ ಜಗತ್ತಿನ ಉಳಿವು ಎಂಬುದನ್ನು ತಮ್ಮ ಧರ್ಮ ಬೋಧನೆಗಳ ಮೂಲಕ ಜನರನ್ನು ಜಾಗೃತರನ್ನಾಗಿಸಿದರು. ಆದ್ಯಾತ್ಮಿಕ ಮುನ್ನಡೆಯ ಜೊತೆ ಜೊತೆಗೆ ಸಮಕಾಲೀನ ಬದುಕಿಗೆ ಅವಶ್ಯವಾದ ಆಧುನಿಕ ಶಿಕ್ಷಣಕ್ಕೂ ಒತ್ತು ನೀಡಿ ಜನರ ಸಮೃದ್ಧ ಬದುಕಿಗೆ ಬುನಾದಿಯನ್ನೂ ಒದಗಿಸಿದ್ದಾರೆ. ಸತ್ಕಾರ್ಯಗಳ ಅನುಷ್ಠಾನದಲ್ಲಿ ನಿರತರಾಗಿದ್ದ ಶ್ರೀಗಳು ಸಾಮಾಜಿಕ ಹಾಗೂ ಆಧ್ಯಾತ್ಮಿಕತೆಯಲ್ಲಿ ತಮ್ಮ ಬದುಕನ್ನು ತೊಡಗಿಸಿಕೊಂಡಿದ್ದು ಅನನ್ಯ, ಅನುಕರಣೀಯ. ಪರಮಪೂಜ್ಯರು ಶತಾಯುಷಿಗಳಾದ ನಂತರವೂ ತಮ್ಮ ಅಪ್ರತಿಮ ಸೇವಾ ಕೈಂಕರ್ಯದ ಮೂಲಕ ಈ ಪುಣ್ಯನೆಲದ ಮಣ್ಣನ್ನು ಪುನೀತಗೊಳಿಸುವ ಪವಿತ್ರ ಕಾರ್ಯದಲ್ಲಿ ನಿರತರಾಗಿದ್ದುದು ನಾಡಿನ ಸೌಭಾಗ್ಯ.

ಶ್ರೀಗಳು ಅಪ್ಪಟ ಮನುಷ್ಯತ್ವದಿಂದಲೇ ದೈವತ್ವಕ್ಕೆ ಏರಿದ ಸದ್ಗುರುಗಳು, ಜಾತಿ, ಪಂಗಡ, ಧರ್ಮಕ್ಕೆ ಅತೀತರಾದವರು. ನಡೆ–ನುಡಿಯಲ್ಲಿ ಮಾನವೀಯ ಧರ್ಮವನ್ನೇ ಉಸಿರಾಡಿದವರು. ಮಾನವ ಕುಲವೊಂದೇ ಎಂದು ಅನುಷ್ಠಾನದ ಮೂಲಕ ಸಾರಿದವರು. ಶ್ರೀಗಳ ಕೃಪಾಕಟಾಕ್ಷದಲ್ಲಿ ಬೆಳೆದ ಅಸಂಖ್ಯಾತ ವಿದ್ಯಾರ್ಥಿಗಳು ನಾಡಿನ ದೇಶದ ಗಡಿ ದಾಟಿ ಪ್ರಪಂಚದ ಮೂಲೆ ಮೂಲೆಗಳಲ್ಲೂ ನಾನಾ ಕ್ಷೇತ್ರಗಳಲ್ಲಿ ಸೇವೆಯನ್ನು ಸಲ್ಲಿಸುತ್ತಾ ಶ್ರೀಗಳ ಛಾಪು ಪ್ರತಿಫಲಿಸುವಂತೆ ನೋಡಿಕೊಂಡು ಶ್ರೀಗಳ ಹಾಗೂ ಮಠದ ಹೆಸರನ್ನು ಎಲ್ಲೆಡೆ ಪಸರಿಸಿದ್ದಾರೆ.

ಶ್ರೀಗಳು **"ಪದ್ಮಭೂಷಣ", "ಕರ್ನಾಟಕ ರತ್ನ",** ಕರ್ನಾಟಕ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಪ್ರಶಸ್ತಿಗಳಲ್ಲದೆ ಇತರೆ ಹತ್ತು ಹಲವಾರು ಪ್ರಶಸ್ತಿ ಪುರಸ್ಕಾರಗಳಿಗೆ ಭಾಜನರಾಗಿದ್ದರು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀಗಳ ನಿಧನದಿಂದಾಗಿ ರಾಜ್ಯ ಹಾಗೂ ರಾಷ್ಟ್ರವು ಶತಮಾನ ಕಂಡ ಮಹಾಯೋಗಿ, ತ್ರಿವಿಧ ದಾಸೋಹಿ, ನಡೆದಾಡುವ ದೇವರು, ಶ್ರೇಷ್ಠ ಸಂತ ಹಾಗೂ ಯತಿಶ್ರೇಷ್ಠರನ್ನು ಕಳೆದುಕೊಂಡು ರಾಷ್ಟ್ರದ ಇತಿಹಾಸದಲ್ಲಿ ಮಹತ್ವದ ಅಧ್ಯಾಯವೊಂದು ಕೊನೆಗೊಂಡಂತಾಗಿದೆ.

**2. ಶ್ರೀ ಜಾರ್ಜ್ ಫರ್ನಾಂಡಿಸ್**

**ಕೇಂದ್ರದ ಮಾಜಿ ಸಚಿವರು, ಸಮಾಜವಾದಿ ಮತ್ತು ಕಾರ್ಮಿಕ ನಾಯಕರಾಗಿದ್ದಂತಹ ಶ್ರೀ ಜಾರ್ಜ್ ಫರ್ನಾಂಡಿಸ್‌ರವರು ದಿನಾಂಕ 29.01.2019 ರಂದು ನಿಧನ ಹೊಂದಿರುತ್ತಾರೆ.**

1930 ಜೂನ್, 03ರಂದು ಮಂಗಳೂರಿನಲ್ಲಿ ಜನಿಸಿದ ಶ್ರೀಯುತರು ಮನೆಯವರ ಒತ್ತಾಯಕ್ಕೆ ಮಣಿದು ಪಾದ್ರಿಯಾಗಲು, ಪಾದ್ರಿ ತರಬೇತಿಗಾಗಿ ಬೆಂಗಳೂರಿಗೆ ಬಂದು ಅವರು ಮಧ್ಯದಲ್ಲಿಯೇ ತರಬೇತಿಯನ್ನು ಬಿಟ್ಟು ಹೊರಬಂದು ಮುಂಬೈಗೆ ತೆರಳಿದರು. ಅಲ್ಲಿ ಸಮಾಜವಾದಿ ನಾಯಕರಾಗಿದ್ದ ರಾಮಮನೋಹರ ಲೋಹಿಯಾ ಮತ್ತು ಹಿರಿಯ ಕಾರ್ಮಿಕ ಮುಖಂಡ ಮಾನ್ಯ ಡಿ'ಮೆಲ್ಲೋರವರ ಸಂಪರ್ಕ ದೊರೆತು ಕಾರ್ಮಿಕ ಚಳುವಳಿಯಲ್ಲಿ ಅಗ್ರಗಣ್ಯ ನಾಯಕರಾಗಿ ರೂಪುಗೊಂಡು ದೇಶದಲ್ಲಿನ ಕಾರ್ಮಿಕ ಚಳವಳಿಗಳಿಗೆ ಹೊಸ ದಿಕ್ಸೂಚಿಯನ್ನು ನೀಡಿದವರು. 1967ರಲ್ಲಿ ದಕ್ಷಿಣ ಮುಂಬೈ ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸಿ ಅಭೂತಪೂರ್ವ ಗೆಲುವು ಸಾಧಿಸಿದವರು. ತದನಂತರ, ಒಂಭತ್ತು ಬಾರಿ ಲೋಕಸಭೆಯ ಸದಸ್ಯರಾಗಿ, 2009ರಲ್ಲಿ ಒಂದು ಬಾರಿ ರಾಜ್ಯ ಸಭೆಯ ಸದಸ್ಯರಾಗಿದ್ದ ಶ್ರೀಯುತರು ಶ್ರೀ ಮುರಾರ್ಜಿ ದೇಸಾಯಿ ರವರ ಸಂಪುಟದಲ್ಲಿ ಕೈಗಾರಿಕಾ ಸಚಿವರಾಗಿ, ಶ್ರೀ ವಿ.ಪಿ.ಸಿಂಗ್‌ರವರ ಸಂಪುಟದಲ್ಲಿ ರೈಲ್ವೆ ಸಚಿವರಾಗಿ ಮತ್ತು ಶ್ರೀ ಅಟಲ್ ಬಿಹಾರಿ ವಾಜಪೇಯಿ ರವರ ಸಂಪುಟದಲ್ಲಿ ರಕ್ಷಣಾ ಸಚಿವರಾಗಿ ಸೇವೆಯನ್ನು ಸಲ್ಲಿಸಿದವರಾಗಿರುತ್ತಾರೆ.

ಕಾರಾವಳಿ ಜಿಲ್ಲೆಗಳ ಅಭಿವೃದ್ಧಿಯ ಮೈಲಿಗಲ್ಲು ಎಂದೇ ಭಾವಿಸಲಾಗುವ ಕೊಂಕಣ ರೈಲ್ವೆ ಯೋಜನೆಯನ್ನು ಕ್ಷಿಪ್ರಗತಿಯಲ್ಲಿ ಪೂರ್ಣಗೊಳಿಸಿದ ಮತ್ತು ಉತ್ತರ ಕನ್ನಡದಲ್ಲಿ ಏಷ್ಯಾ ಖಂಡದಲ್ಲಿಯೇ ದೊಡ್ಡ ನೌಕಾನೆಲೆಯಾದ ಕದಂಬ ನೌಕಾ ನೆಲೆಯನ್ನು ನಿರ್ಮಾಣ ಮಾಡುವಲ್ಲಿ ಮಹತ್ತರ ಪಾತ್ರವನ್ನು ವಹಿಸಿ ನಾಡಿನ ಜನರ ಮನಸ್ಸಿನಲ್ಲಿ ಚಿರಸ್ಥಾಯಿಯಾಗಿರುವರು.

ರಕ್ಷಣಾ ಸಚಿವರಾಗಿ ಪೊಖ್ರಾನ್ ಅಣ್ವಸ್ತ್ರ ಪರೀಕ್ಷೆಯನ್ನು ಯಶಸ್ವಿಯಾಗಿಸಿದ ಹಾಗೂ ಪಾಕಿಸ್ತಾನದ ವಿರುದ್ಧ ನಡೆದ ಕಾರ್ಗಿಲ್ ಯುದ್ಧದಲ್ಲಿ ಜಯ ಸಾಧಿಸಿದ ಕೀರ್ತಿಗೆ ಭಾಜನರಾಗಿದ್ದರು. ನಿರ್ಭಯ, ದೂರದರ್ಶಿತ್ವ ಕಲ್ಪನೆಗಳನ್ನು ಹೊಂದಿದ್ದ ಶ್ರೀಯುತರು ಕಾರ್ಮಿಕ ವರ್ಗದ ಪರ ಹೋರಾಟದ ಜೊತೆಗೆ ದಕ್ಷ ಆಡಳಿತಗಾರರಾಗಿ ದೇಶಕ್ಕೆ ಉತ್ತಮ ಕೊಡುಗೆಯನ್ನು ನೀಡಿದ್ದಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕನ್ನಡ, ಹಿಂದಿ, ಇಂಗ್ಲೀಷ್, ತಮಿಳು, ಮರಾಠಿ, ಉರ್ದು, ಮಲೆಯಾಳಂ, ತುಳು, ಕೊಂಕಣಿ ಮತ್ತು ಲ್ಯಾಟಿನ್ ಭಾಷೆಗಳಲ್ಲಿ ಪಾಂಡಿತ್ಯವನ್ನು ಹೊಂದಿದ್ದ ಶ್ರೀಯುತರು **'ಕೊಂಕಣಿ ಯುವಕ್'**, ಕನ್ನಡದ **'ರೈತವಾಣಿ'** ಇಂಗ್ಲೀಷ್ ಮಾಸಿಕ ಪತ್ರಿಕೆ' 'The Other Side' ಪತ್ರಿಕೆಯ ಸಂಪಾದಕರಾಗಿದ್ದರು. ಅಲ್ಲದೆ 'What Ails the Socialists', 'The Kashmir Problem', 'Railway Strike of 1974', 'Dignity for All', 'Essays in Socialism and Democracy' ಮತ್ತು ಅವರ ಆತ್ಮಚರಿತ್ರೆಯಾದ 'George Fernandes Speaks' ಗ್ರಂಥಗಳನ್ನು ರಚಿಸಿದ್ದಾರೆ. **'ಪ್ರತಿಪಕ್ಷ್'** ಹಿಂದಿ ಪತ್ರಿಕೆಯ ಸಂಪಾದಕೀಯ ಮಂಡಲಿಯ ಅಧ್ಯಕ್ಷರಾಗಿ, ಪ್ರೆಸ್ ಕೌನ್ಸಿಲ್ ಆಫ್ ಇಂಡಿಯಾ ಮತ್ತು Amnesty International, People's Union for Civil Liberties ಸಂಸ್ಥೆಗಳ ಸದಸ್ಯರಾಗಿಯೂ ಸೇವೆಯನ್ನು ಸಲ್ಲಿಸಿದ್ದಾರೆ.

ಇವರ ನಿಧನದಿಂದಾಗಿ ದೇಶವು ಒಬ್ಬ ಧೀಮಂತ ರಾಜಕಾರಣಿ, ಸಮಾಜವಾದಿ ಮತ್ತು ಕಾರ್ಮಿಕ ನಾಯಕ, ಸರಳ ಸಜ್ಜನಿಕೆಯ ಒಬ್ಬ ಶ್ರೇಷ್ಠ ಸಂಸದೀಯ ಪಟುವನ್ನು ಕಳೆದುಕೊಂಡಂತಾಗಿದೆ.

### 3. ಶ್ರೀ ಲೋಕನಾಥ್

**ಖ್ಯಾತ ಕನ್ನಡ ಚಲನ ಚಿತ್ರರಂಗ ಮತ್ತು ರಂಗಭೂಮಿಯ ಹಿರಿಯ ನಟ ಲೋಕನಾಥ್‌ರವರು ದಿನಾಂಕ 31.12.2018ರಂದು ನಿಧನ ಹೊಂದಿರುತ್ತಾರೆ.**

1927 ಆಗಸ್ಟ್, 14ರಂದು ಬೆಂಗಳೂರಿನಲ್ಲಿ ಜನಿಸಿದ್ದ ಶ್ರೀಯುತರು ಕನ್ನಡ ಚಿತ್ರರಂಗ ಕಂಡ ಅದ್ಭುತ ಕಲಾವಿದರುಗಳಲ್ಲಿ ಒಬ್ಬರು. ಒಂದು ಸಾವಿರ ನಾಟಕಗಳು, 650 ಕ್ಕೂ ಹೆಚ್ಚು ಚಲನಚಿತ್ರಗಳಲ್ಲಿ ನಟಿಸಿದ್ದಾರೆ. 'ಸಂಸ್ಕಾರ' ಚಲನಚಿತ್ರದ ಮೂಲಕ ಚಿತ್ರರಂಗ ಪ್ರವೇಶಿಸಿದ ಶ್ರೀಯುತರು **'ಬೂತಯ್ಯನ ಮಗ ಅಯ್ಯು'** ಚಿತ್ರದಲ್ಲಿ ಬೂತಯ್ಯನ ಮನೆ ಉಪ್ಪಿನಕಾಯಿ ಜಾಡಿ ಖಾಲಿ ಮಾಡುವ ಅವರ ಅಭಿನಯ ಅಜರಾಮರ. **'ಮಿಂಚಿನ ಓಟ' 'ಕಾಕನ ಕೋಟೆ' 'ಕಾಡು ಬೆಳದಿಂಗಳು'** ಮುಂತಾದ ಕಲಾತ್ಮಕ ಚಿತ್ರಗಳಲ್ಲಿನ ಅವರ ಅಭಿನಯ ಜನರ ಮನಸ್ಸಿನಲ್ಲಿ ಸದಾ ಹಸಿರಾಗಿದೆ. ಶ್ರೀಯುತರು ಕಿರುತೆರೆಗಳಲ್ಲಿಯೂ ಹಲವಾರು ಧಾರವಾಹಿಗಳಲ್ಲಿ ಅಭಿನಯಿಸಿ, ನಿರ್ಮಿಸಿ ನಿರ್ದೇಶಿಸಿದ್ದಾರೆ. **'ಮಿಂಚಿನ ಓಟ'** ಚಿತ್ರದ ಅಭಿನಯಕ್ಕಾಗಿ **'ಉತ್ತಮ ಪೋಷಕ ನಟ'** ಪ್ರಶಸ್ತಿ, **'ರಾಜ್ಯೋತ್ಸವ ಪ್ರಶಸ್ತಿ'**ಯು ಸೇರಿದಂತೆ ಅನೇಕ ಪ್ರಶಸ್ತಿ ಪುರಸ್ಕಾರಗಳಿಗೆ ಭಾಜನರಾಗಿದ್ದರು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಶ್ರೀಯುತರ ನಿಧನದಿಂದಾಗಿ ಕನ್ನಡ ಚಲನಚಿತ್ರರಂಗ ಹಾಗೂ ರಂಗಭೂಮಿಯ ಅಭಿಜಾತ ಕಲಾವಿದರೊಬ್ಬರನ್ನು ಕಳೆದುಕೊಂಡಂತಾಗಿದೆ.

**ಡಾ॥ ಜಯಮಾಲ (ಸಭಾನಾಯಕರು):–** ಮಾನ್ಯ ಸಭಾಪತಿಯವರೆ, **'ಶರಣರ ಗುಣವನ್ನು ಮರಣದಲ್ಲಿ ಕಾಣು'** ಎಂದು ಹೇಳುತ್ತಾರೆ. ಪೂಜ್ಯ ಶ್ರೀಗಳು ಲಿಂಗೈಕ್ಯರಾದಾಗ ಬಹುಶಃ ಇಡೀ ನಾಡಿಗೆ ನಾಡೇ ಜಾತಿ, ಮತ ಮತ್ತು ಭೇದ ಎಲ್ಲವನ್ನೂ ಮರೆತು, ಎಲ್ಲರೂ ಕೂಡ ಶೋಕ ಸಾಗರದಲ್ಲಿ ಮುಳುಗಿದ್ದನ್ನು ನಾವು ಕಂಡಿದ್ದೇವೆ. ಮಕ್ಕಳಿಂದ ಹಿಡಿದು, ವೃದ್ಧರವರೆಗೂ ಹೀಗೆ ಎಲ್ಲರ ಕಣ್ಣಲ್ಲೂ ಕೂಡ ಕಣ್ಣೀರು ಧಾರಾಕಾರವಾಗಿ ಸುರಿಯುತ್ತಿದ್ದುದನ್ನು ನಾವು ಆ ಜಾಗದಲ್ಲಿ ಕಂಡೆವು. ಅನ್ನದಾಸೋಹ, ಅಕ್ಷರದಾಸೋಹ, ಆಶ್ರಯ ದಾಸೋಹ ಎನ್ನುವಂತಹ ಈ ತ್ರಿವಿಧ ದಾಸೋಹಗಳ ಸೂತ್ರದಾರರಾಗಿ ಶ್ರೀಗಳು ನಮ್ಮ ಕಣ್ಣುಮುಂದೆ ಇಂದಿಗೂ ಇದ್ದಾರೆ. ಅವರು ನಡೆದು ಬಂದಂತಹ ಹಾದಿಯ ಎಲ್ಲಾ ಹೆಜ್ಜೆ ಗುರುತುಗಳನ್ನು ನಮಗೆ ಬಿಟ್ಟು ಹೋಗಿದ್ದಾರೆ. 111 ವರ್ಷ ಬದುಕಿದ **'ಕಾಯಕ ಯೋಗಿ'** ಯವರು ಪ್ರತಿ ದಿನ ತಮ್ಮ ಮಠದಲ್ಲಿ ಹತ್ತು ಸಾವಿರಕ್ಕೂ ಹೆಚ್ಚು ಬಡಮಕ್ಕಳಿಗೆ ಅನ್ನದಾನ ಮತ್ತು ವಿದ್ಯಾದಾನವನ್ನು ಮಾಡುತ್ತಿದ್ದರು. ಬಹುಶಃ ಇಡೀ ಜಗತ್ತಿನಲ್ಲಿಯೇ ಇದೊಂದು ವಿಶ್ವದಾಖಲೆ ಎಂದು ಹೇಳಲಿಕ್ಕೆ ನಮಗೆಲ್ಲರಿಗೂ ಸಂತೋಷವಾಗುತ್ತಿದೆ. ಮಾನ್ಯ ಸಭಾಪತಿಯವರೇ, ರಾಷ್ಟ್ರಪತಿಗಳಾಗಿದ್ದಂತಹ ಡಾ॥ಎ.ಪಿ.ಜೆ. ಅಬ್ದುಲ್ ಕಲಾಂ ರವರು ಶ್ರೀಗಳ ಬಗ್ಗೆ

**"ನೀವು ನಿಮ್ಮೆದುರಿಗೆ ನೋಡಿ ಒಬ್ಬ ರಸಋಷಿ**
**ಸುಂದರ ಅನುಭಾವದ ಹಾರೈಕೆ ಹೊತ್ತ ಯೋಗಋಷಿ**
**ಅನುದಿನವೂ ಭಗವಂತ ನಿಮಗೆ ಕರುಣಿಸಿದ ಈ ಯೋಗಿ**
**ಬೆಲೆಯುಳ್ಳ ಜೀವನದ ವೈಡೂರ್ಯವಾಗಿ**
**ಮಾನವೀಯತೆಯೇ ಈ ಋಷಿಯ ಸಂದೇಶ**
**ಓ ನನ್ನ ನಾಗರಿಕ ಬಂಧುಗಳೇ, 'ಕೊಡುವಲ್ಲಿ ಪಡೆಯಿರಿ ನೆಮ್ಮದಿಗಳ ಸಮಾವೇಶ "**

ಡಾ॥ಎ.ಪಿ.ಜೆ. ಅಬ್ದುಲ್ ಕಲಾಂ ರವರು ಬೆಲೆಬಾಳುವಂತಹ ವೈಡೂರ್ಯದ ಬಗ್ಗೆ, ಆ ನಡೆದಾಡುವ ದೇವರ ಬಗ್ಗೆ ಒಂದು ಕವನವನ್ನು ಹೀಗೆ ಪ್ರಕಟ ಮಾಡಿದ್ದರು. ಇದೇ ಸಂದರ್ಭದಲ್ಲಿ ಶ್ರೀಗಳ ಬಗ್ಗೆ ಒಂದು ಸಂದರ್ಶನವನ್ನು ನಾನು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳುವುದಕ್ಕೆ ಇಷ್ಟಪಡುತ್ತೇನೆ.

**(ಮುಂದು...)**

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(04)6-2-2019/12.10/mm-rn**

(ಸಭಾಪತಿಯವರ ಉಪಸ್ಥಿತಿ)

**ಡಾ॥ ಜಯಮಾಲ (ಸಭಾನಾಯಕರು) (ಮುಂದು):–**

ಒಮ್ಮೆ ಸಂದರ್ಶನಕಾರರು ಶ್ರೀಗಳನ್ನು ಸಂದರ್ಶನ ಮಾಡುವಾಗ ಅವರು 'ಶ್ರೀಗಳೇ ತಾವು ಯಾವತ್ತಾದರೂ ದೇವರನ್ನು ಕಂಡಿದ್ದೀರಾ' ಎಂದು ಒಂದು ಪ್ರಶ್ನೆಯನ್ನು ಕೇಳುತ್ತಾರೆ. ಅದಕ್ಕೆ ಶ್ರೀಗಳು 'ಹೌದು ನಾನು ದೇವರನ್ನು ಕಂಡಿದ್ದೇನೆ' ಎಂದು ಹೇಳುತ್ತಾರೆ. 'ನೀವು ದೇವರನ್ನು ನಿಜವಾಗಿಯೂ ಕಂಡಿದ್ದೀರಾ, ಎಲ್ಲಿ ಕಂಡಿದ್ದೀರಿ' ಎಂದು ಮರು ಪ್ರಶ್ನಿಸಿದಾಗ ಅವರು 'ನನ್ನ ಸಿದ್ಧಗಂಗಾ ಮಠದಲ್ಲಿ ದೇವರನ್ನು ಕಂಡಿದ್ದೇನೆ' ಎಂದು ಹೇಳುತ್ತಾರೆ. ಸಂದರ್ಶನಕಾರರಿಗೆ ತಡೆದುಕೊಳ್ಳಲಾಗದೇ ಪುನಃ ಇನ್ನೊಮ್ಮೆ ಕೇಳುತ್ತಾರೆ; 'ಶ್ರೀಗಳೇ ನೀವು ಮಠದಲ್ಲಿ ಯಾವಾಗ ದೇವರನ್ನು ಕಂಡಿರಿ' ಎಂದು ಕೇಳಿದಾಗ ಶ್ರೀಗಳು ಹೇಳುತ್ತಾರೆ, 'ನನ್ನ ಮಠದಲ್ಲಿ ನಾನು ಒಬ್ಬ ದೇವರನ್ನು ಕಾಣಲಿಲ್ಲ, ಹತ್ತು ಸಹಸ್ರ ದೇವರನ್ನು ಕಂಡಿದ್ದೇನೆ, ನಿತ್ಯವೂ ಹತ್ತು ಸಹಸ್ರ ದೇವರನ್ನು ಮಕ್ಕಳ ರೂಪದಲ್ಲಿ ಕಂಡಿದ್ದೇನೆ' ಎಂದು ಹೇಳಿದರು. ಈ ಸಂದರ್ಶನದಲ್ಲಿ ಅವರು ಹೇಳಿರುವ ಮಾತುಗಳು ಶ್ರೀಗಳಾಗಿ ಅವರಲ್ಲಿದ್ದ ಮಾತೃ ಹೃದಯ ನಮಗೆ ಅರ್ಥವಾಗುತ್ತಾ ಹೋಗುತ್ತದೆ. 'ಸ್ಥಾವರಕ್ಕೆ ಅಳಿವುಂಟು, ಜಂಗಮಕ್ಕೆ ಅಳಿವಿಲ್ಲ' ಎನ್ನುವ ಹಾಗೆ ಬಸವಣ್ಣನವರ ಮಾತು ಸಂಪೂರ್ಣವಾಗಿ ಅನ್ವಯಿಸುವುದಾದರೆ ಅದು ಸಿದ್ಧಗಂಗಾ ಶ್ರೀಗಳಿಗೆ ಅನ್ವಯಿಸುತ್ತದೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಅವರ ಆದರ್ಶಗಳನ್ನು ಪಾಲಿಸಬೇಕೆಂದು ಹೇಳುವಾಗ, ನನ್ನ ಬದುಕಿನಲ್ಲೂ ಕೂಡ ನಾನು ಶ್ರೀಗಳನ್ನು ನೋಡಿದ ನೆನಪು ಇದೆ. 1978ರ ದಶಕದಲ್ಲಿ ಕೆಮ್ಮಣ್ಣುಗುಂಡಿ, ಚಿಕ್ಕಮಗಳೂರು, ತರೀಕೆರೆಗಳಲ್ಲಿ ಚಲನಚಿತ್ರದ ಶೂಟಿಂಗ್ ಮುಗಿಸಿಕೊಂಡು ವಾಪಸ್ ಬರುವಾಗ; ಡಾ: ರಾಜ್‌ಕುಮಾರ್ ಅವರಿಗೆ ಸಿದ್ಧಗಂಗಾ ಮಠದ ಸ್ವಾಮಿಗಳೆಂದರೆ ಅಪಾರ ಗೌರವವಿತ್ತು. ಆಗ ನಮ್ಮೆಲ್ಲರನ್ನೂ ಸೀದಾ ಮಠದ ಒಳಗಡೆಯೇ ಕರೆದುಕೊಂಡು ಹೋಗುತ್ತಿದ್ದರು. ಡಾ: ರಾಜ್‌ಕುಮಾರ್ ರವರಿಗೆ ಒಂದು ಆಸೆ ಇತ್ತು. ಅವರು ಯಾವಾಗಲೂ ಸ್ವಾಮಿಗಳನ್ನು ತಾವು ಪೂಜೆ ಮಾಡುವುದನ್ನು ನಾವು ನೋಡಬೇಕೆಂದು ಕೇಳುತ್ತಿದ್ದರು. ಪೂಜೆ ಮಾಡುವಾಗ ಸ್ವಾಮಿಗಳು ಯಾವಾಗಲೂ ದುಂಬಿ ಮುಟ್ಟದ ಹೂವನ್ನು ಅವರೇ ಕೊಯ್ದು ತರುತ್ತಿದ್ದರು. ಅವರು ಹೂಗಳನ್ನು ಕೊಯ್ಯುವಾಗ ನಾವೆಲ್ಲರೂ ಹೋಗಿ ನೋಡಿದ್ದೇವೆ. ಅವರು ಬೆಳಗಿನ ಜಾವ ಎರಡು ಗಂಟೆಗೇ ಸ್ನಾನ ಮಾಡುತ್ತಿದ್ದರು. ದುಂಬಿ ಮುಟ್ಟದ ಹೂವನ್ನು ತಂದು ಸುಮಾರು ಒಂದೂವರೆ ಗಂಟೆಗಳ ಕಾಲ ಪೂಜೆ ಮಾಡುತ್ತಿದ್ದರು. ಅವರು ಪೂಜೆ ಮಾಡುವಾಗ ಅಷ್ಟೊತ್ತೂ ಕುಳಿತುಕೊಂಡು ಅಷ್ಟೊಂದು ಏಕಾಗ್ರತೆಯಿಂದ ಪೂಜೆ ಮಾಡುವುದನ್ನು ನೋಡಿದರೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ನಮಗೆಲ್ಲಾ ಖುಷಿಯಾಗುತ್ತಿತ್ತು. ನಂತರ ಡಾ: ರಾಜ್‌ಕುಮಾರ್ ರವರು ಪಾರ್ವತಮ್ಮನವರಿಗೆ 'ಪಾರ್ವತಿ, ನೀನು ಸ್ವಾಮಿಗಳಿಗೆ ಕಾಲು ನಮಸ್ಕಾರ ಮಾಡುವಾಗ ಸಂಪೂರ್ಣವಾಗಿ ಅವರ ಪಾದದ ಹಿಮ್ಮಡಿಯಿಂದ ಪೂರ್ತಿ ಕಾಲನ್ನು ಮುಟ್ಟಿ ನಮಸ್ಕಾರ ಮಾಡು, ಆ ಸ್ಪರ್ಶ ಮಾಡಬೇಕಾದರೆ ವಿದ್ಯುತ್ ಸಂಚಾರವಾಗುತ್ತದೆ, ನೀನು ತಕ್ಷಣವೇ ಅವರ ಕಣ್ಣನ್ನು ನೋಡು, ಅವರ ಕಣ್ಣಿನಲ್ಲಿ ನೀನು ದೈವತ್ವವನ್ನು ಕಾಣುತ್ತೀಯ' ಎಂದು ಹೇಳುತ್ತಿದ್ದರು. ಸ್ವಾಮಿಗಳ ಪಾದ, ಅವರು ಆಚರಿಸಿದಂತಹ ಪೂಜೆಗಳು, ಮಕ್ಕಳನ್ನು ದೇವರ ಹಾಗೆ ಕಂಡಿರುವುದು, ಪರಿಸರವನ್ನೇ ಪರಮಾತ್ಮನೆಂದು ಭಾವಿಸಿರುವಂತಹದ್ದು, ಅವರು ಅಂತಹ ಪುಣ್ಯಾತ್ಮರಾಗಿದ್ದರು. ಅವತ್ತಿನಿಂದ ಡಾ: ರಾಜಕುಮಾರ್‌ರವರು ನಮಗೆ ಒಂದು ಪರಿಪಾಠವನ್ನು ಹಾಕಿಕೊಟ್ಟಿದ್ದರು. ನಾವು ಯಾವಾಗಲೂ ಮಠಕ್ಕೆ ಹೋದಾಗ, ಸ್ವಾಮಿಗಳಿಗೆ ನಮಸ್ಕಾರ ಮಾಡಿದಾಗ ಅವರನ್ನು ನೋಡುವುದು ನಮಗೊಂದು ಪುಣ್ಯ. ಇವೆಲ್ಲವನ್ನೂ ನಾವು ಕಂಡಿದ್ದೇವೆ. ಹೀಗೆ ಇಂತಹ ಮಹಾನ್ ಚೇತನ, ನಡೆದಾಡುವ ದೇವರು, ಅವರ ಆದರ್ಶವನ್ನು ನಾವೆಲ್ಲರೂ, ಪ್ರತಿಯೊಬ್ಬರೂ ಪಾಲಿಸಿದರೆ ಅದೇ ನಾವು ಅವರಿಗೆ ಸಲ್ಲಿಸುವ ಗೌರವ ಎಂದು ಭಾವಿಸಿ, ಎಲ್ಲರ ಪರವಾಗಿ, ಸದನದ ಪರವಾಗಿ ನಾನು ಅವರಿಗೆ ಅನಂತ ಪ್ರಣಾಮಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಜಾರ್ಜ್ ಫರ್ನಾಂಡಿಸ್‌ರವರ ಬಗ್ಗೆ ಹೇಳುವುದಾದರೆ ಅವರು ಭಾರತದ ರಾಜಕಾರಣದ ಇತಿಹಾಸದಲ್ಲಿ ಅತ್ಯಂತ ಸರಳ, ಸಜ್ಜನ, ಅಪ್ರತಿಮ ಹೋರಾಟಗಾರರು. ಅವರ ಬದುಕಿನುದ್ದಕ್ಕೂ ಕೂಡ ಧ್ವನಿ ಇಲ್ಲದವರ ಪರವಾಗಿ, ಶೋಷಿತರ ಪರವಾಗಿ ಅವರು ನಿಂತು ಹೋರಾಟ ಮಾಡಿರುವುದು, ನಮಗೆಲ್ಲರಿಗೂ ಕೂಡ ಅವರು ಮಾದರಿಯಾಗಿದ್ದಾರೆ. ಕರ್ನಾಟಕ ಮಾತ್ರವಲ್ಲ, ಅದು ಬಿಹಾರ ಆಗಿರಬಹುದು, ಮಧ್ಯಪ್ರದೇಶ, ಉತ್ತರ ಪ್ರದೇಶ, ಮಹಾರಾಷ್ಟ್ರ ಮತ್ತು ದೆಹಲಿ ಆಗಿರಬಹುದು ಯಾವುದೇ ಕಡೆಯಲ್ಲಿ ಕೂಡ ಅವರು ಸಕ್ರಿಯ ರಾಜಕಾರಣವನ್ನು ಮೈಗೂಡಿಸಿಕೊಂಡಿರುವುದರ ಜೊತೆಗೆ, ಅವರು ಒಂದು ರಾಜ್ಯಕ್ಕೆ ಅಂಟಿಕೊಂಡು ರಾಜಕಾರಣ ಮಾಡದ ಒಬ್ಬ ಶ್ರೇಷ್ಠ ಹೋರಾಟಗಾರರಾಗಿದ್ದರು. ನನಗೆ ಒಂದೇ ಒಂದು ಹೆಮ್ಮೆಯೆಂದರೆ, ಅವರು ನಮ್ಮ ಕರ್ನಾಟಕದ ದಕ್ಷಿಣ ಕನ್ನಡದ ಮಂಗಳೂರಿನವರಾಗಿದ್ದರು. ನಾನು ಅವರನ್ನು ನೋಡಿದ್ದೇನೆ, ಆದರೆ ಅವರ ಜೊತೆ ಮಾತನಾಡುವ ಯೋಗ ನನಗೆ ಸಿಗಲಿಲ್ಲ. ಅವರು ಭಾರತದ ರೈಲ್ವೆ ಸಚಿವರಾಗಿ, ಕೈಗಾರಿಕೆ ಸಚಿವರಾಗಿ ಮತ್ತು ರಕ್ಷಣಾ ಸಚಿವರಾಗಿ ಯಶಸ್ವಿಯಾಗಿ ಕಾರ್ಯನಿರ್ವಹಿಸಿದ್ದರು. ಅದೆಲ್ಲಕ್ಕಿಂತ ಹೆಚ್ಚಿನದಾಗಿ ಅವರ ಬಗ್ಗೆ ನಾವು ಕೇಳಿರುವುದೇನೆಂದರೆ, ಕಾರ್ಮಿಕ ಮುಖಂಡರಾಗಿ, ನಾಯಕರಾಗಿ ಹೋರಾಟದಲ್ಲಿ ರೈಲ್ವೆ ಕಾರ್ಮಿಕರಿರಬಹುದು ಅಥವಾ ಹೋಟೆಲ್ ಮಾಣಿಗಳಿರಬಹುದು ಧ್ವನಿ ಇಲ್ಲದಿರುವವರ ಪರವಾಗಿ ನಿಂತು ಹೋರಾಟ ಮಾಡಿ ಅವರಿಗೆ ನ್ಯಾಯ ದೊರಕಿಸಿಕೊಟ್ಟಿದ್ದಾರೆ. ಇಂತಹ ಅನೇಕ ಹೋರಾಟಗಳ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಂದರ್ಭದಲ್ಲಿ ಅವರು ಜೈಲು ಸೇರಿರುವುದನ್ನು ಸಹ ನಾವು ಕೇಳಿದ್ದೇವೆ. ಅಂತಹ ಮಹಾನ್ ಚೇತನವನ್ನು ಇವತ್ತು ನೆನಪಿಸಿಕೊಳ್ಳಬೇಕು.

ಎಲ್ಲಕ್ಕಿಂತ ಮುಖ್ಯವಾಗಿ ಕರ್ನಾಟಕದ ವಿಚಾರದಲ್ಲಿ ನಾನು ನೆನಪಿಸಿಕೊಳ್ಳುವುದೇನೆಂದರೆ, ಅನೇಕ ವರ್ಷಗಳ ಕಾಲ ನೆನೆಗುದಿಗೆ ಬಿದ್ದಂತಹ ಕೊಂಕಣ ರೈಲ್ವೆಯನ್ನು ತಂದು ನೀಡುವಲ್ಲಿ ಅವರ ಪಾತ್ರವನ್ನು ನಾವು ಮರೆಯುವುದಕ್ಕೆ ಸಾಧ್ಯವಿಲ್ಲ. ಹಾಗೆಯೇ ಕಾರವಾರದಲ್ಲಿರುವ 'ಸೀ-ಬರ್ಡ್' ನೌಕಾನೆಲೆಯನ್ನು ಅವರು ಸುಸಜ್ಜಿತವಾಗಿ ಬೆಳೆಸಿರುವ ಕೀರ್ತಿ, ಪೋಖ್ರಾನ್‌ನಲ್ಲಿ ಪರಮಾಣು ಅಣ್ವಸ್ತ್ರದ ಪರೀಕ್ಷೆಯ ಉಸ್ತುವಾರಿಯನ್ನು ವಹಿಸಿದ್ದಂತಹ ರೀತಿಗೆ ಸಂದ ಕೀರ್ತಿ ಎಲ್ಲವೂ ಕೂಡ ಅವರಿಗೆ ಸಲ್ಲುವಂಥದ್ದು. ಎಲ್ಲಕ್ಕಿಂತಲೂ ನಮಗೆಲ್ಲರಿಗೂ ಕೂಡ ಮಾದರಿ ಎಂದರೆ, ಅವರು ಎಂತಹ ಎತ್ತರ, ಉನ್ನತ ಸ್ಥಾನಕ್ಕೇರಿದರೂ ಕೂಡ ಅತ್ಯಂತ ಸರಳರಲ್ಲಿ ಸರಳರಾಗಿದ್ದರು. ಐಷಾರಾಮಿ ಜೀವನಕ್ಕೆ ಒಗ್ಗದೇ ರಾಜಕಾರಣ ಕ್ಷೇತ್ರದಲ್ಲಿ ಯಾವುದಕ್ಕೂ ಅಂಟಿಕೊಳ್ಳದೇ ಕೇವಲ ಹೋರಾಟದ ನೆಲೆಯಲ್ಲಿ ಅವರು ಬದುಕನ್ನು ಕಂಡುಕೊಂಡಂತಹವರು. ಅವರು ಹಳೆಯ ಮತ್ತು ಹೊಸ ತಲೆಮಾರಿನ ರಾಜಕಾರಣದ ನಡುವಿನ ಹಿರಿಯ ಕೊಂಡಿಯಾಗಿದ್ದರು. ಅವರ ನಿಧನದಿಂದ ಈ ಕೊಂಡಿ ಕಳಚಿಕೊಂಡಿದೆ ಎಂದು ನಮಗನ್ನಿಸುತ್ತದೆ.

ಶ್ರೀ ಲೋಕನಾಥ್‌ರವರ ಬಗ್ಗೆ ಹೇಳುವುದಾದರೆ ಅವರು ನಾಯಕರಾಗಿ ಚಿತ್ರರಂಗಕ್ಕೆ ಪಾದಾರ್ಪಣೆ ಮಾಡಲಿಲ್ಲ, ಪೋಷಕ ಪಾತ್ರದಲ್ಲಿ ಬಂದರೂ ಕೂಡ ಕನ್ನಡ ಚಿತ್ರಕ್ಕೆ ಮೊಟ್ಟ ಮೊದಲ ಬಾರಿಗೆ 'ಸ್ವರ್ಣ ಕಮಲ'ವನ್ನು ತಂದಂತಹ 'ಸಂಸ್ಕಾರ' ಚಿತ್ರದ ಮೂಲಕ ಅವರು ಚಿತ್ರರಂಗಕ್ಕೆ ಪಾದಾರ್ಪಣೆ ಮಾಡಿದರು. 'ಸಂಸ್ಕಾರ' ಅವರ ಮೊದಲ ಚಿತ್ರವಾದರೂ 'ಗೆಜ್ಜೆಪೂಜೆ' ಚಿತ್ರದಲ್ಲಿ ಅವರು ಒಂದು ಒಳ್ಳೆಯ ಪಾತ್ರದ ಮುಖಾಂತರ ಚಿತ್ರರಂಗಕ್ಕೆ ಪಾದಾರ್ಪಣೆ ಮಾಡಿದರು. ಸುಮಾರು 400ಕ್ಕೂ ಹೆಚ್ಚಿನ ಚಿತ್ರಗಳಲ್ಲಿ ನಟಿಸಿರುವ ಅವರನ್ನು 'ಲೋಕನಾಥ್ ಅಂಕಲ್' ಎಂಬ ಹೆಸರಿನಿಂದಲೇ ಇವತ್ತಿಗೂ ಕರೆಯುತ್ತೇವೆ. ಸಾವಿರಕ್ಕೂ ಹೆಚ್ಚಿನ ಪಾತ್ರಗಳನ್ನು ರಂಗಭೂಮಿಯಲ್ಲಿ ಮಾಡಿದ್ದಾರೆ. ಧಾರಾವಾಹಿಗಳನ್ನು ಮಾಡಿದ್ದಾರೆ, ಜೊತೆಯಲ್ಲಿ ಕಿರುತೆರೆಯಲ್ಲಿ ಬಹಳ ದೊಡ್ಡ ಕೊಡುಗೆಯನ್ನು ನೀಡಿದ್ದಾರೆ. ಅವರು ಅತ್ಯುತ್ತಮ ಪೋಷಕ ಪಾತ್ರಗಳಿಗೆ ಜೀವ ತುಂಬಿ ನಟಿಸಿರುವ ಅನೇಕ ಚಿತ್ರಗಳಿವೆ. ನಾವು ಅವರ ಕಂಚಿನ ಕಂಠವನ್ನು ಮರೆಯುವುದಕ್ಕೆ ಸಾಧ್ಯವಿಲ್ಲ. ಅವರು ವೈದ್ಯರಾಗಿ, ಅಡುಗೆ ಭಟ್ಟರಾಗಿ, ವಕೀಲರಾಗಿ, ಜಮೀನ್ದಾರರಾಗಿ, ಮೇಷ್ಟ್ರಾಗಿ, ರಾಜಕಾರಣಿಗಳ ತಂದೆಯಾಗಿ, ದೊಡ್ಡಣ್ಣನಾಗಿ, ಬೀಗರಾಗಿ ಹೀಗೆ ಅನೇಕ ಪಾತ್ರಗಳಲ್ಲಿ ಅವರು ನಟಿಸಿದ್ದಾರೆ. ಆದರೆ ಅವರ ಬದುಕಿನಲ್ಲಿ ಅನುಸರಿಸಿದ ಹಲವಾರು ರೀತಿಗಳನ್ನು, ಶಿಸ್ತನ್ನು ಇವತ್ತು ಚಿತ್ರರಂಗದ ಎಲ್ಲರೂ, ಪ್ರತಿಯೊಬ್ಬರೂ ಕೂಡ ನೆನೆಸಿಕೊಳ್ಳುವಂತಹದ್ದಾಗಿದೆ. ಅವರ ನೈಜ ಅಭಿನಯದ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬಗ್ಗೆ ನಾನು ಎರಡು ವಿಷಯಗಳನ್ನು ಹೇಳಬೇಕು. 'ಭೂತಯ್ಯನ ಮಗ ಅಯ್ಯು' ಚಿತ್ರದಲ್ಲಿ ಅವರು ಒಂದು ಅತ್ಯುತ್ತಮವಾದಂತಹ ಪಾತ್ರವನ್ನು ಮಾಡಿದ್ದರು. ಅದರಲ್ಲಿ ಅವರಿಗೆ ಉಪ್ಪಿನಕಾಯಿಯನ್ನು ತಿನ್ನುವಂತಹ ಆಸೆಯಾಗಿ ಒಂದು ಸಲ ಉಪ್ಪಿನಕಾಯಿ ಭರಣಿಯನ್ನು ಕದ್ದು ತಂದು ಇಡೀ ಭರಣಿಯಲ್ಲಿದ್ದ ಉಪ್ಪಿನಕಾಯಿಯನ್ನು ತಿನ್ನುತ್ತಾರೆ. ಅದರ impact ಹೇಗಿತ್ತು ಎಂದರೆ, ಆ ಚಿತ್ರದ ಶತದಿನೋತ್ಸವ ಸಂದರ್ಭದಲ್ಲಿ ಒಬ್ಬ ಹೆಂಗಸು ಉಪ್ಪಿನಕಾಯಿಯ ಭರಣಿಯನ್ನು ತಂದು 'ನೋಡಪ್ಪ ನಿನಗೆ ಉಪ್ಪಿನಕಾಯಿಯನ್ನು ತಿನ್ನಬೇಕೆನಿಸಿದಾಗಲೆಲ್ಲಾ ನನಗೆ ಹೇಳು, ನಾನು ಉಪ್ಪಿನಕಾಯಿಯನ್ನು ಮಾಡಿಕೊಡುತ್ತೇನೆ. ಆದರೆ ನೀನು ಉಪ್ಪಿನಕಾಯಿಯನ್ನು ಕದ್ದು ತಿನ್ನಬೇಡ' ಎಂದು ಹೇಳಿ ಒಂದು ಭರಣಿ ಉಪ್ಪಿನಕಾಯಿಯನ್ನು ಅವರಿಗೆ ಕೊಡುತ್ತಾರೆ. ಇದು ಏನನ್ನು ಸೂಚಿಸುತ್ತದೆ ಎಂದರೆ, ಆ ಚಿತ್ರದಲ್ಲಿ ಅವರು ಕಾಣಿಸಿಕೊಳ್ಳುವಂತಹದ್ದು ಬಹಳ ಕಡಿಮೆ ಸಮಯ.

(ಮುಂದು)

(5) 06-02-2019/12-20/ಕೆಹೆಚ್-ಆರ್‌ಎನ್

**(ಸಭಾಪತಿಯವರ ಉಪಸ್ಥಿತಿ)**

**ಡಾ॥ ಜಯಮಾಲ (ಮುಂದು):-** ಆದರೆ ಅದರ ಪ್ರಭಾವ ಎಷ್ಟು ಜನರನ್ನು ತಲುಪುತ್ತದೆ ಎಂಬುದಕ್ಕೆ ಇದೊಂದು ನಿದರ್ಶನವಾಗಿದೆ. ಹಾಗೆಯೇ ಇನ್ನೊಂದು ಸನ್ನಿವೇಶವನ್ನು ನಾನು ಈ ಸದನದಲ್ಲಿ ಪ್ರಸ್ತಾಪ ಮಾಡಬೇಕಾಗುತ್ತದೆ. ಒಮ್ಮೆ ರಂಗಭೂಮಿಯಲ್ಲಿ ನಟಿಸುವಾಗ ಮಾನ್ಯ ಲೋಕನಾಥ್‌ರವರಿಗೆ ಹೃದಯಾಘಾತವಾಗುತ್ತದೆ. ಮಾರನೇ ದಿವಸ ಆ ನಾಟಕವನ್ನು ಮಾಡಬೇಕಾಗಿದ್ದು, ಎಲ್ಲರೂ ಕೂಡ ಆ ನಾಟಕವನ್ನು ಮಾಡುವುದಕ್ಕೆ ಆಗುವುದಿಲ್ಲ. ನಿಲ್ಲಿಸುತ್ತೇವೆ ಎಂದು ಹೇಳುತ್ತಾರೆ. ಆದರೆ ಮಾನ್ಯ ಲೋಕನಾಥ್‌ರವರು ಆ ನಾಟಕವನ್ನು ನಿಲ್ಲಿಸದೆ ಆ ಪಾತ್ರವನ್ನು ನಿರ್ವಹಿಸಿ, ಎಲ್ಲರಿಂದಲೂ ಕೂಡ ಸೈ ಎನಿಸಿಕೊಂಡಂತಹ ಒಬ್ಬ ವ್ಯಕ್ತಿಯಾಗಿದ್ದಾರೆ. ಅವರ ಶಿಸ್ತು ಎಷ್ಟರಮಟ್ಟಿಗೆ ಇತ್ತೆಂದರೆ, ಬೆಳಿಗ್ಗೆ 6 ಗಂಟೆ, 5 ಗಂಟೆ ಮತ್ತು 4 ಗಂಟೆ ಎಷ್ಟು ಗಂಟೆಗೆ ಹೇಳುತ್ತಾರೋ ಅಷ್ಟು ಗಂಟೆಗೆ ನಟನೆಗಾಗಿ ಬಣ್ಣವನ್ನು ಹಂಚಿಕೊಂಡು ಸಿದ್ದರಾಗಿ ಬರುತ್ತಿದ್ದರು. ಕೆಲವೊಮ್ಮೆ ನಿರ್ಮಾಪಕರು ಇವರು ಕೇಳಿರುವ ದುಡ್ಡಿಗಿಂತ ಜಾಸ್ತಿ ದುಡ್ಡನ್ನು ಕೊಡುತ್ತಿದ್ದರು. ಆದರೆ ಇವರು ಡಬ್ಬಿಂಗ್ ಆದ ತಕ್ಷಣ ಎಷ್ಟು ದುಡ್ಡು ಬಂದಿದೆ ಎಂದು ಲೆಕ್ಕ ಹಾಕಿ, ಆ ದುಡ್ಡನ್ನು ಒಂದು ಕವರ್‌ನಲ್ಲಿ ಹಾಕಿ, ಕೊನೆಯ ದಿವಸ ಡಬ್ಬಿಂಗ್ ಮುಗಿದ ನಂತರ ಆ ನಿರ್ಮಾಪಕನನ್ನು ಕರೆದು ನೀನು ಜಾಸ್ತಿ ದುಡ್ಡನ್ನು ಕೊಟ್ಟಿದ್ದೆ ಎಂದು ವಾಪಸ್ಸು ಕೊಡುತ್ತಿದ್ದರು. ಆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಿರ್ಮಾಪಕನು ನಾನು ಬೇಕಾಗಿ ಜಾಸ್ತಿ ದುಡ್ಡನ್ನು ಕೊಟ್ಟಿರುವೆ. ತಾವು ಎಷ್ಟು ಚೆನ್ನಾಗಿ ನಟನೆಯನ್ನು ಮಾಡಿದ್ದೀರಿ ಅಂಕಲ್ ಎಂದು ಹೇಳಿದರೆ ನನ್ನ ಪಾತ್ರಕ್ಕೆ ಎಷ್ಟು ದುಡ್ಡು ಬೇಕೋ ಅಷ್ಟೇ ದುಡ್ಡು ನಾನು ತೆಗೆದುಕೊಳ್ಳುವುದು, ನಿನ್ನ ಹೆಚ್ಚಿನ ದುಡ್ಡು ನನಗೆ ಬೇಡ ಎಂದು ಹೇಳುತ್ತಿದ್ದರು. ಅಷ್ಟು ಶಿಸ್ತನ್ನು ಅವರು ಹೊಂದಿದ್ದರು. ಅವರ ಅಕ್ಕ-ಪಕ್ಕದಲ್ಲಿ ಯಾವುದೇ ರೀತಿಯಾದಂತಹ ತಪ್ಪುಗಳಾದಾಗ ಶಿಕ್ಷಕರ ರೀತಿಯಲ್ಲಿ ಅವರನ್ನೆಲ್ಲಾ ಕರೆದು ಆ ತಪ್ಪನ್ನು ಸರಿಪಡಿಸುವಂತಹ ಬಹಳ ದೊಡ್ಡ ಗುಣವನ್ನು ಹೊಂದಿದ್ದರು. ಈ ಎಲ್ಲಾ ಶ್ರೇಷ್ಠರು ನಮ್ಮನ್ನು ಅಗಲಿದ್ದಾರೆ. ಈ ಎಲ್ಲಾ ಮೃತರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ತಮ್ಮೆಲ್ಲರ ಪರವಾಗಿ ಅವರುಗಳಿಗೆ ನಮನವನ್ನು ಸಲ್ಲಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಸಮಾಜದ ಅತ್ಯಂತ ಹಿರಿಯರಾಗಿರುವ ಲಿಂಗೈಕ್ಯರಾದ ಪೂಜ್ಯ ಸಿದ್ದಗಂಗಾ ಮಠಾಧೀಶರು, ಕೇಂದ್ರದ ಮಾಜಿ ಸಚಿವರಾದ ಜಾರ್ಜ್ ಫರ್ನಾಂಡಿಸ್ ಮತ್ತು ರಂಗಭೂಮಿಯ ಹಿರಿಯ ನಟ ಲೋಕನಾಥ್‌ರವರಿಗೆ ತಾವು ಸಂತಾಪ ಸೂಚನೆಯನ್ನು ಮಂಡಿಸಲಾಗಿದ್ದು, ಇದಕ್ಕೆ ಸದನವು ಸಹಮತವನ್ನು ನೀಡುತ್ತದೆ. ಒಂದು ದೃಷ್ಟಿಯಲ್ಲಿ ಶತಮಾನದ ಸಂತ, ನಡೆದಾಡುವ ದೇವರು ಅನ್ನ, ಅಕ್ಷರ, ಜ್ಞಾನ ಈ ತ್ರಿವಿಧ ದಾಸೋಹಿ ಎಂದು ಶ್ರೀ ಶಿವಕುಮಾರ ಸ್ವಾಮೀಜಿಗಳನ್ನು ಏನು ಕರೆಯುತ್ತೇವೆ, ಬಹುಶಃ ಜಗತ್ತಿಗೆ ಇವರು ಮಾದರಿ ಪುರುಷರಾಗಿರುವಂತಹ ಒಬ್ಬ ಕಾಯಕದ ಕರ್ಮಯೋಗಿ, ಲಿಂಗೈಕ್ಯರಾದ ಸಿದ್ದಗಂಗಾ ಮಠದ ಶ್ರೀ ಶಿವಕುಮಾರ ಸ್ವಾಮೀಜಿಗಳು ನಮ್ಮೆಲ್ಲ ಊಹೆಗೂ ನಿಲುಕದಂತಹ ಒಬ್ಬ ದಾರ್ಶನಿಕರು ಎಂದು ಇಡೀ ರಾಜ್ಯ ಮಟ್ಟದಲ್ಲಿ ಹಾಗೂ ಇಡೀ ದೇಶ ಮಟ್ಟದಲ್ಲಿ ಗೊತ್ತಾಗಿದೆ. ಅಂತಹ ಪುಣ್ಯಪುರುಷನಿಗೆ ತಾವು ಮಂಡಿಸುವ ಸಂತಾಪ ಸೂಚನೆಯು ಅತ್ಯಂತ ಶ್ರೇಷ್ಠವಾದುದು ಎಂದು ಹೇಳಿ, ಇದರಲ್ಲಿ ನಾವು ಸಹ ಭಾಗಿಯಾಗುತ್ತೇವೆ. ಮಾನ್ಯ ಸಭಾಪತಿಯವರೇ, ತಾವು ಮತ್ತು ಸಭಾನಾಯಕರು ಉಲ್ಲೇಖ ಮಾಡಿರುವುದನ್ನು ಬಿಟ್ಟು ಹೇಳಬೇಕಾದರೆ, 10 ಸಾವಿರ ಮಕ್ಕಳಿಗೆ ನಿತ್ಯ ಊಟವನ್ನು ಬಡಿಸುವಂತಹ ರೀತಿ, ಪ್ರತಿ ವಿದ್ಯಾರ್ಥಿಯಲ್ಲೂ ಕೂಡ ಧಾರ್ಮಿಕ ಪ್ರಜ್ಞೆಯನ್ನು ಬಿತ್ತುವಂತಹ ಒಂದು ಕ್ರಮ ಮತ್ತು ಪ್ರತಿ ಮಗುವನ್ನು ಶ್ರೇಷ್ಠ ಪ್ರಜೆಯನ್ನಾಗಿ ರೂಪಿಸುವುದಕ್ಕೆ ಮಠ ಕೊಡುವಂತಹ ಒಂದು ಪರಿಪಾಠ, ಇದೆಲ್ಲದಕ್ಕೂ ಒಂದು ಮಾದರಿಯಾಗಿ ಸಿದ್ದಗಂಗಾ ಮಠ ಇದೆ ಎಂದು ನಾವು ನಂಬಿದ್ದೇವೆ. ನಾನು ಸ್ವಾಮೀಜಿಗಳ ಬಗ್ಗೆ ಮಾಹಿತಿಯನ್ನು ಸಂಗ್ರಹಿಸುವಾಗ ಪೂಜ್ಯರು ಕುದುರೆ ಸವಾರಿಯನ್ನು ಮಾಡುತ್ತಿರುವ ಫೋಟೋಗಳು ದೊರೆತಿದೆ. ಇದನ್ನು ನೋಡಿ ನನಗೆ ಆಶ್ಚರ್ಯವಾಯಿತು. ಸುಮಾರು 111 ವರ್ಷಗಳ ಕಾಲ ನಮ್ಮೊಡನೆ ಬದುಕಿದ್ದರು ಮತ್ತು ಅವರ ಪೂರ್ಣ ಆರೋಗ್ಯ ಕೆಡುವಂತಹ ಸ್ವಲ್ಪ ದಿವಸಗಳ ಹಿಂದೆ ಕೂಡ ನಡೆದಾಡುತ್ತಿದ್ದರು. ವಿಶೇಷವಾಗಿ ಅವರ ಆರೋಗ್ಯದ ಬಗ್ಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆಶ್ಚರ್ಯವೇನೆಂದರೆ, ಅವರು ಕೊನೆಯವರೆಗೂ ಕೂಡ ಬರಿಗಣ್ಣಿನಲ್ಲಿ ಓದುತ್ತಿದ್ದರು. ಅಂತಹ ಒಬ್ಬ ಪುಣ್ಯಪುರುಷ ಇತಿಹಾಸಕ್ಕೆ ಸೇರಿ ಹೋಗಿದ್ದಾರೆ. ಎಲ್ಲಕ್ಕಿಂತ ಮುಖ್ಯವಾಗಿ ಅವರ ಮಠವೇ ಒಂದು ನ್ಯಾಯಾಲಯವಾಗಿತ್ತು ಎಂದು ವರದಿಗಳು ತಿಳಿಸುತ್ತವೆ. ಯಾವ ನ್ಯಾಯಾಲಯಕ್ಕೂ ತೀರ್ಮಾನ ಮಾಡುವುದಕ್ಕೆ ಆಗದೇ ಇರುವಂತಹ ಅನೇಕ ಘಟನೆಗಳು, ಸಮಸ್ಯೆಗಳು ಮತ್ತು ಗೊಂದಲಗಳನ್ನು ಸ್ವಾಮೀಜಿಗಳು ಅವರನ್ನು ಕರೆದು ಕೂರಿಸಿ, ಧಾರ್ಮಿಕ ವಿಚಾರಗಳನ್ನು ಅವರ ಮನಸ್ಸಿನಲ್ಲಿ ತುಂಬಿ, ಅವರ ಮನಸ್ಸಿನಲ್ಲಿರುವಂತಹ ಎಲ್ಲಾ ಕ್ಲೇಷಗಳನ್ನು ಹೊರ ತೆಗೆದು ಹೃದಯಗಳನ್ನು ಬೆಸೆಯುವುದರ ಮೂಲಕ ಮಠದಲ್ಲಿಯೇ ನ್ಯಾಯಾಲಯದ ರೀತಿಯಲ್ಲಿ ನ್ಯಾಯದಾನ ಮಾಡುತ್ತಿದ್ದರು ಎನ್ನುವಂತಹ ವಿಚಾರವನ್ನು ಮರೆಯುವುದಕ್ಕೆ ಸಾಧ್ಯವಿಲ್ಲ. ಹಾಗೆಯೇ ಸಂಸ್ಕೃತ ಪಾಠಶಾಲೆಯೊಂದಿಗೆ ಪ್ರಾರಂಭವಾಗಿರುವಂತಹ ಒಂದು ಶಿಕ್ಷಣ ಸಂಸ್ಥೆಯೂ ಒಂದು ಅಕ್ಷರ ವೃಕ್ಷವಾಗಿ ಬೆಳೆದು 125ಕ್ಕೂ ಹೆಚ್ಚು ಶಿಕ್ಷಣ ಸಂಸ್ಥೆಗಳನ್ನು ಪ್ರಾರಂಭ ಮಾಡುತ್ತದೆ ಎನ್ನುವಂತಹ ವಿಚಾರ ಈ ಜಗತ್ತಿನ ಒಂದು ಐತಿಹಾಸಿಕ ಘಟನೆಯಾಗಿದೆ. ಆಸ್ಪತ್ರೆಯಲ್ಲಿ ಸ್ವಾಮೀಜಿಗಳು ಪೂರ್ಣ ಆರೋಗ್ಯ ಕೆಟ್ಟು ತೀವ್ರ ನಿಗಾ ಘಟಕದಲ್ಲಿ ಮಲಗಿರುವಾಗಲೂ ಕೂಡ ಎಡಗೈನಲ್ಲಿ ವಿಭೂತಿಯ ಕಟ್ಟನ್ನು ಹಿಡಿದು, ಬಲಗೈಯಲ್ಲಿ ಆ ವಿಭೂತಿಯನ್ನು ಹಚ್ಚಿಕೊಳ್ಳುವಂತಹ ರೀತಿ ತುಂಬಾ ಅದ್ಭುತವಾದದ್ದು ಎಂದು ಅನಿಸುತ್ತದೆ. ಈ ಪೂಜ್ಯ ಸ್ವಾಮೀಜಿಗಳ ಸಂದರ್ಶನವನ್ನು ಮಾಡಿದಂತಹ ದಿವಂಗತ ಅಟಲ್ ಬಿಹಾರಿ ವಾಜಪೇಯಿಯವರು "ಉತ್ತರದಲ್ಲಿ ದೇವಗಂಗ, ದಕ್ಷಿಣದಲ್ಲಿ ಸಿದ್ದಗಂಗಾ" ಎಂದು ಹೇಳಿರುವ ಮಾತನ್ನು ಈ ಸಂದರ್ಭದಲ್ಲಿ ನೆನಪು ಮಾಡಿಕೊಳ್ಳಬೇಕು. ಇನ್ನು ಅನೇಕ ವಿಚಾರಗಳ ಬಗ್ಗೆ ಉಲ್ಲೇಖ ಮಾಡುವಂತಹ ಅಗತ್ಯವಿಲ್ಲ. ಶ್ರೇಷ್ಠ ಕವಿ ಶಿವರುದ್ರಪ್ಪರವರು ಒಂದು ಸಣ್ಣ ಕವನವನ್ನು ಹೇಳಿದ್ದಾರೆ;

"ಸದ್ದುಗದ್ದಲವಿರದ ಸಾಧನೆ ಇಲ್ಲಿ ಗದ್ದುಗೆಯೇರಿದೆ,<br>
ಕಾಯಕವೇ ಕೈಲಾಸವೆನ್ನುವ ಮಾತು ಕೃತಿಯೊಳು ಮೂಡಿದೆ,<br>
ಕಾವಿಯುಡುಗೆಯನ್ನುಟ್ಟು ನಭವೇ ಕಿರಣಹಸ್ತವ ಚಾಚಿದೆ,<br>
ಎಲ್ಲ ನನ್ನವರೆನ್ನುವ ಭಾವದ ಕರುಣೆಯೇ ಕಣ್ತೆರೆದಿದೆ, ನೀನೇ ಸಿದ್ದಗಂಗಾ,"

ಎನ್ನುವಂತಹ ಮಾತುಗಳನ್ನು ಇಲ್ಲಿ ನೆನಪು ಮಾಡಿಕೊಂಡು ಅತ್ಯಂತ ಶ್ರೇಷ್ಠರಾಗಿರುವಂತಹ ಪೂಜ್ಯ ಸ್ವಾಮೀಜಿಗಳಿಗೆ ತಮ್ಮ ಮೂಲಕ ಸಂತಾಪವನ್ನು ಸೂಚಿಸುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಕೇಂದ್ರದ ಮಾಜಿ ಸಚಿವರಾದ ಜಾರ್ಜ್ ಫರ್ನಾಂಡಿಸ್‌ರವರ ಬಗ್ಗೆ ತಾವು ಸಂತಾಪ ಸೂಚನೆಯನ್ನು ಮಂಡನೆ ಮಾಡಿದ್ದೀರಿ. ಪಾದ್ರಿ ತರಬೇತಿಯನ್ನು ಪಡೆಯುವುದಕ್ಕೆ ಬಂದ ಜಾರ್ಜ್ ಫರ್ನಾಂಡಿಸ್‌ರವರು ಈ ಭಾರತ ದೇಶದಲ್ಲಿ ಇಷ್ಟು ದೊಡ್ಡ ವ್ಯಕ್ತಿಯಾಗಿ, ಶಕ್ತಿಯಾಗಿ, ಸಂಘಟಕನಾಗಿ,

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಚಳುವಳಿಕಾರನಾಗಿ, ರಾಜಕಾರಣಿಯಾಗಿ ಮತ್ತು ಮಂತ್ರಿಯಾಗಿ ಬೆಳೆಯುತ್ತಾರೆಂದರೆ, ಯಾರಿಗೂ ಕೂಡ ಊಹಿಸುವುದಕ್ಕೆ ಸಾಧ್ಯವಿಲ್ಲ. ದಿವಂಗತ ಅಟಲ್ ಬಿಹಾರಿ ವಾಜಪೇಯಿಯವರು ಪ್ರಧಾನ ಮಂತ್ರಿಯಾಗಿದ್ದಾಗ ಇವರು ರಕ್ಷಣಾ ಸಚಿವರಾಗಿದ್ದು, ಇವರು ಸಚಿವರಾಗಿ ಮಾಡಿರುವಂತಹ ಸಾಧನೆಗಳು ಒಂದು ಭಾಗವಾಗಿದೆ. ಜಾರ್ಜ್ ಫರ್ನಾಂಡಿಸ್‌ರವರ ಧೈರ್ಯ ಯಾವ ರೀತಿಯಲ್ಲಿತ್ತೆಂದರೆ ಸಿಯಾಚಿನ್ ಗಡಿ ಭಾಗಕ್ಕೆ ಹೋಗಿ ನಿಂತುಕೊಂಡು ವೀಕ್ಷಣೆ ಮಾಡಿರುವಂತಹ ರೀತಿಯನ್ನು ಆವತ್ತಿನ ಮಾಧ್ಯಮಗಳು ಹೇಳಿರುವುದನ್ನು ಕೇಳಿ ನಮಗೆ ಆಶ್ಚರ್ಯವಾಗುತ್ತದೆ. ದಿವಂಗತ ವಿ.ಪಿ.ಸಿಂಗ್‌ರವರ ಕಾಲದಲ್ಲಿ ಇವರು ರೈಲ್ವೆ ಸಚಿವರಾಗಿ ಸೇವೆ ಸಲ್ಲಿಸಿರುವುದನ್ನು ನೆನಪಿಸಿಕೊಳ್ಳಬೇಕು. ಆಗ ಕೊಂಕಣ ರೈಲ್ವೆ ಶಿಲಾನ್ಯಾಸ ಮಾಡುವಾಗ ಇವರ ದೂರದೃಷ್ಟಿ ಎಷ್ಟಿತ್ತೆಂದರೆ, ನಾನು ರೈಲ್ವೆ ಮಂತ್ರಿಯಾಗಿ ಇರಬಹುದು ಅಥವಾ ಇಲ್ಲದೇ ಇರಬಹುದು, ಆದರೆ ನಾನು ಮಾಡಿರುವಂತಹ ಯೋಜನೆಯಿಂದಾಗಿ ಸಕಾಲದಲ್ಲಿ ಈ ಯೋಜನೆ ಪೂರ್ಣಗೊಳ್ಳುತ್ತದೆ ಎಂಬ ವಿಶ್ವಾಸ ನನಗಿದೆ ಎನ್ನುವಂತಹ ಮಾತನ್ನು ಉದ್ಗರಿಸಿದ್ದರು. ಆ ಮಾತಿನಂತೆ ಅವರು ಮಾಡಿರುವಂತಹ ಒಟ್ಟು ಯೋಜನೆ ಫಲಪ್ರದವಾಗಿ ಸಾಮಾನ್ಯ ಜನರಿಗೆ ಸಿಗುವುದಕ್ಕೆ ಅವಕಾಶವಾಯಿತು. ಆದರೆ ಇವತ್ತಿನ ದಿವಸ ಶಿಲಾನ್ಯಾಸ ಮಾಡಿ 30 ವರ್ಷಗಳಾದರೂ ಕಾಮಗಾರಿಗಳು ಪ್ರಾರಂಭವಾಗದೇ ಇರುವುದನ್ನು ನೋಡಬಹುದು. ಒಂದೊಂದು ಬಾರಿ ಶಿಲಾನ್ಯಾಸ ಮಾಡಿ ಮೂರ್ಮೂರು ಬಾರಿ ಮತ್ತೊಂದು ಸರ್ಕಾರ ಕಾಮಗಾರಿಗಳನ್ನು ಜಾರಿಗೊಳಿಸಿರುವಂತಹ ರೀತಿಯನ್ನು ನೋಡಬಹುದು. ಇದನ್ನು ನೆನಪಿಸಿಕೊಂಡಾಗ ರಾಜಕಾರಣಿಯಾಗಿ, ಮಂತ್ರಿಯಾಗಿ ಬದ್ಧತೆಯಿರುವುದನ್ನು ನೋಡಿದರೆ, ನಾನು ಅಧಿಕಾರದಲ್ಲಿ ಇರಲಿ, ಇಲ್ಲದೇ ಇರಲಿ, ನಾನು ಮಾಡಿರುವಂತಹ ಯೋಜನೆ ಸಕಾಲದಲ್ಲಿ ಪೂರ್ಣಗೊಳ್ಳುತ್ತದೆ ಎಂಬ ಮಾತನ್ನು ಜಾರ್ಜ್ ಫರ್ನಾಂಡಿಸ್‌ರವರು ಹೇಳುತ್ತಾರೆ ಮತ್ತು ಅದರಂತೆ ನಡೆದುಕೊಳ್ಳುತ್ತಾರೆ. ಜಾರ್ಜ್ ಫರ್ನಾಂಡಿಸ್‌ರವರು ಕೈಗಾರಿಕಾ ಮಂತ್ರಿಯಾಗಿರುವಾಗ CoCa-Cola ಎಂಬ ವಿದೇಶಿ ಪಾನೀಯವನ್ನು ವಿರೋಧಿಸಿರುವಂಥದ್ದು ಮತ್ತು ಇದರ ಬಗ್ಗೆ ಹೇಳಿರುವಂತಹ ಹೇಳಿಕೆಗಳು ನಮಗೆ ದಿಗ್ಭ್ರಮೆ ಉಂಟು ಮಾಡುತ್ತದೆ. ದಮನಿತರ ವಿರುದ್ಧ ಅವರು ಧ್ವನಿಯಾಗಿದ್ದರು ಎಂಬ ಮಾತನ್ನು ಹೇಳಬಹುದು. ಇವರು ಸಣ್ಣ ವಯಸ್ಸಿನಲ್ಲಿ ಮಂಗಳೂರಿನ ಕೆಲವು ಹೋಟೆಲ್‌ಗಳಲ್ಲಿ ಸಣ್ಣ–ಪುಟ್ಟ ಕೆಲಸಗಳನ್ನು ಮಾಡುತ್ತಿದ್ದರು. ಸರಕು–ಸಾಗಾಣಿಕೆಯಲ್ಲಿ ಕೂಲಿ ಆಳಾಗಿ ದುಡಿಯುತ್ತಿದ್ದರು ಮತ್ತು ಅನಂತರ ಅವರ ಬದುಕಿನಲ್ಲಿ ಹೋಟೆಲ್ ಕಾರ್ಮಿಕರು, ಅಸಂಘಟಿತವಾದ ಶೋಷಿತ ಕಾರ್ಮಿಕರನ್ನು ಒಟ್ಟುಗೂಡಿಸಿ ಅವರು ಹೋರಾಟವನ್ನು ಮಾಡಿದರು. ಕೆಲಸವನ್ನು ಹುಡುಕಿಕೊಂಡು ಮುಂಬೈಗೆ ಹೋದಾಗ ಬೀದಿ ಬದಿಯಲ್ಲಿ ಮಲಗಿದ್ದೆ ಎಂಬ ವಿಷಯವನ್ನು ಅವರದೇ ಆದ ಪತ್ರಿಕೆಯಲ್ಲಿ ಬರೆದುಕೊಂಡಿದ್ದರು. ರಾಮಮನೋಹರ ಲೋಹಿಯಾರವರ ಸಹಚರಿಗೆ ಬಂದ ನಂತರ ಜಾರ್ಜ್

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಫರ್ನಾಂಡಿಸ್‌ರವರು ಅವರ ಕಾರ್ಯಕ್ರಮಗಳಿಂದ ಪ್ರೇರಿತರಾಗಿ ಹೋಟೆಲ್ ಕಾರ್ಮಿಕರು, ಶೋಷಿತ ಕಾರ್ಮಿಕರನ್ನು ಒಟ್ಟುಗೂಡಿಸಿ, ಹೋರಾಟ ಮಾಡಿ ಕಾರ್ಮಿಕ ನಾಯಕರಾಗಿ ಮೂಡಿಬರುತ್ತಾರೆ. ಅವರು Railway Federation ನ ಅಧ್ಯಕ್ಷರಾಗಿದ್ದಾಗ ಇಡೀ ಭಾರತದಾದ್ಯಂತ ಚಳುವಳಿ ಮಾಡಿದ್ದಂತಹ ರೀತಿಗೆ ಇಡೀ ಭಾರತವೇ ಒಂದು ರೀತಿ ಸ್ತಬ್ಧವಾಗಿತ್ತು ಎನ್ನುವಂತಹ ಮಾತುಗಳು ಕೂಡ ಕೇಳಿ ಬರುತ್ತದೆ. ಸಾಮಾನ್ಯವಾಗಿ 1977ರ ತುರ್ತು ಪರಿಸ್ಥಿತಿಯ ನಂತರ ಚಿಕ್ಕಮಗಳೂರು ಲೋಕಸಭಾ ಕ್ಷೇತ್ರದಲ್ಲಿ ಶ್ರೀಮತಿ ಇಂದಿರಾ ಗಾಂಧಿಯವರು ಸ್ಪರ್ಧೆ ಮಾಡಿದಾಗ, ಆವತ್ತಿನ ಕಾಲಘಟ್ಟದಲ್ಲಿ ಅಭ್ಯರ್ಥಿಗಳು ಇಲ್ಲವೆಂದು ತಿಳಿದುಕೊಳ್ಳುವಂತಹ ಸಂದರ್ಭದಲ್ಲಿ ಜಾರ್ಜ್ ಫರ್ನಾಂಡಿಸ್‌ರವರು ಕುತ್ತಿಗೆಗೆ ಒಂದು ಜೋಳಿಗೆಯನ್ನು ಹಾಕಿಕೊಂಡು ಸಾರ್ವಜನಿಕರ ಹತ್ತಿರ ಪಾರ್ಟಿ ಮತ್ತು ಅಭ್ಯರ್ಥಿಯ ಪರವಾಗಿ ಧನಸಂಗ್ರಹವನ್ನು ಮಾಡಿ ಚುನಾವಣೆಗೆ ಖರ್ಚು ಮಾಡಿರುವಂತಹದ್ದನ್ನು ನೋಡಬಹುದು. ಆಗ ಎಲೆಕ್ಟ್ರಾನಿಕ್ ಮೀಡಿಯಾಗಳ ವ್ಯವಸ್ಥೆ ಇರಲಿಲ್ಲ. ಆದರೆ ಪ್ರಿಂಟ್ ಮೀಡಿಯಾಗಳ ವ್ಯವಸ್ಥೆಗಳಿತ್ತು. ಇದರ ಫಲಿತಾಂಶ ಮತ್ತು ವಿಚಾರಗಳೇನು ಎಂಬ ಬಗ್ಗೆ ಪ್ರಶ್ನೆಯಲ್ಲ, ಒಬ್ಬ ವ್ಯಕ್ತಿಯು ಬಹುದೊಡ್ಡ ಚುನಾವಣೆಯನ್ನು ಎದುರಿಸುವುದಕ್ಕೆ ಜನರ ಮಧ್ಯೆ ಓಡಾಡಿಕೊಂಡು ಬೆಳೆದಿರುವಂತಹ ರೀತಿ ಮತ್ತು ಅವರ ಮಾತುಗಳು ನಮಗೆ ಅತ್ಯಂತ ದಿಗ್ಭ್ರಮೆಯನ್ನುಂಟು ಮಾಡುತ್ತದೆ. ಜಾರ್ಜ್ ಫರ್ನಾಂಡಿಸ್‌ರವರು ತುರ್ತು ಪರಿಸ್ಥಿತಿಯ ದಿವಸಗಳಲ್ಲಿ ಸರ್ಕಾರಕ್ಕೆ ಸವಾಲಾಗಿ ತುರ್ತು ಪರಿಸ್ಥಿತಿಯನ್ನು ವಿರೋಧಿಸಿದಂತಹ ಸಂದರ್ಭದಲ್ಲಿ ಲಾರೆನ್ಸ್ ಫರ್ನಾಂಡಿಸ್ ಮತ್ತು ಸ್ನೇಹಿತಾ ರೆಡ್ಡಿರವರ ಅನಾರೋಗ್ಯದ ಸಂದರ್ಭದಲ್ಲೂ ಕೂಡ ಸರ್ಕಾರವು ಅವರುಗಳನ್ನು ಬಂಧಿಸಿರುವ ವಿಷಯವನ್ನು ತಿಳಿದು, ಅವರು ಹೋರಾಟವನ್ನು ಬದಲು ಮಾಡಿದ ರೀತಿ ಅದಾಗಿರುತ್ತದೆ.

(ಮುಂದು)

**(6) 06/02/2019/12:30/ಎಸ್‌ಪಿಆರ್/ವಿಕೆ**

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಮುಂದು):-**

ಒಟ್ಟಾರೆಯಾಗಿ ದಿವಂಗತ ಜಾರ್ಜ್ ಫರ್ನಾಂಡಿಸ್‌ರವರು ನಮಗೆ ಅದ್ಭುತವಾಗಿ ಕಾಣಿಸುತ್ತಾರೆ. ಇವತ್ತಿನ ದಿವಸ ಅನೇಕ ಸಂದರ್ಭಗಳಲ್ಲಿ ನೋಡುವುದೇನೆಂದರೆ, ರಾಜಕಾರಣಿಗಳಿಗೆ ಜನರನ್ನು ಓಲೈಸುವ ಹಾಗೂ ಅವರಿಗಾಗಿ ಮನಸ್ಸನ್ನು ಕೊಡುವಂತಹ ಭಾವನೆಗಳು, ಅತ್ಯಂತ ಜಾಗ್ರತೆಯಾಗಿ ಹೇಳಿಕೆ ಕೊಡುವ ರೀತಿ ಇವುಗಳೆಲ್ಲವೂ ಸಹ ಅನಿವಾರ್ಯವಾಗಿರುತ್ತವೆ. ಆದರೆ ಜಾರ್ಜ್ ಫರ್ನಾಂಡಿಸ್‌ರವರು ಯಾವ ರೀತಿಯಾಗಿ ಇದ್ದರೆಂದರೆ, ಅಂದಿನ ತುರ್ತು ಪರಿಸ್ಥಿತಿಯನ್ನು ವಿರೋಧಿಸಿದ ಅವರ ಮಾತು, ನಡೆ, ನುಡಿ, ಕೃತಿ ಹಾಗೂ ಅವರ ಒಟ್ಟಾರೆಯ ಚಟುವಟಿಕೆಗಳು ಯುವ ಜನಾಂಗಕ್ಕೆ ಒಂದು ರೀತಿಯ ಉತ್ಸಾಹವನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನೀಡುವಂತಹದ್ದಾಗಿತ್ತು ಹಾಗೂ ತುಂಬಾ ಪ್ರೀತಿ ಭರಿತವಾಗಿತ್ತು. ಅವರೊಬ್ಬ ಬಹು ದೊಡ್ಡ ವ್ಯಕ್ತಿ. ಅವರಿಗೆ ಕೋಟ್ಯಾಂತರ ಅಭಿಮಾನಿಗಳಿದ್ದರು. ಯಾವುದೋ ಒಂದು ಸಂದರ್ಭದಲ್ಲಿ ಅವರು ಅಂದಿನ ಸರ್ಕಾರದ ವಿರುದ್ಧ ನೀಡಿದ ಒಂದು ಹೇಳಿಕೆಯಿಂದಾಗಿ ಅವರ ಅಭಿಮಾನಿಗಳೆಲ್ಲರೂ ಅವರ ವಿರುದ್ಧವಾಗುತ್ತಾರೆ. ಆಗ ಮಾಧ್ಯಮದವರು ಜಾರ್ಜ್ ಫರ್ನಾಂಡಿಸ್‌ರವರ ಬಳಿ ಬಂದು, 'ನೋಡಿ ಇಷ್ಟು ದಿವಸ ನೀವು ಜನಗಳ ಮಧ್ಯದಲ್ಲಿ ಹೀರೋ ಆಗಿದ್ದಿರಿ; ಆದರೆ ನಿಮ್ಮನ್ನು ಈಗ ಮೊಟ್ಟೆಯಿಂದ ಹೊಡೆಯುತ್ತೇವೆ ಎಂಬುದಾಗಿ ಬೆದರಿಕೆಯನ್ನು ಹಾಕುತಿದ್ದಾರೆ' ಎಂಬುದಾಗಿ ಹೇಳಿದಾಗ, ಅದಕ್ಕೆ ಪ್ರತಿಕ್ರಿಯಿಸಿದ ದಿವಂಗತರು 'ನನಗೆ ಅನಿಸಿದ್ದನ್ನು ನಾನು ಹೇಳಿದ್ದೇನೆ; ಈ ಮೊದಲು ನಾನು ಜನಪ್ರಿಯನಾಗಿದ್ದು ನನಗೆ ಗೊತ್ತಿಲ್ಲ' ಎಂಬುದಾಗಿ ಹೇಳಿದ್ದರು. 'ನನಗೆ ಅನಿಸಿದ್ದನ್ನು ಜನರು ಏಕೆ ತೀರ್ಮಾನ ಮಾಡುತ್ತಾರೆ ಎನ್ನುವುದು ಸಮಾಜಕ್ಕೆ ಸಂಬಂಧಪಟ್ಟ ವಿಚಾರ; ನನಗೆ ಅಲ್ಲ' ಎಂಬುದಾಗಿ ಅವರು ಹೇಳಿದ್ದರು. ಇವತ್ತಿನ ದಿವಸ ಪ್ರಚಾರದಂತಹ ಯುಗದಲ್ಲಿ ದಿವಂಗತರು ನಮಗೆಲ್ಲಾ ಆದರ್ಶಪ್ರಾಯರಾಗಿದ್ದಾರೆ ಎನ್ನುವಂತಹ ಮಾತುಗಳನ್ನು ನಾನು ಈ ಸಂದರ್ಭದಲ್ಲಿ ನೆನಪು ಮಾಡಿಕೊಳ್ಳುತ್ತೇನೆ. ಅತ್ಯಂತ ಶ್ರೇಷ್ಠರಾದ ಜಾರ್ಜ್ ಫರ್ನಾಂಡಿಸ್‌ರವರಿಗೆ ಈ ಸದನದಲ್ಲಿ ತಾವು ಸೂಚಿಸಿರುವ ಸಂತಾಪಕ್ಕೆ ನಾನು ನನ್ನ ಸಹಮತವನ್ನು ವ್ಯಕ್ತಪಡಿಸುತ್ತೇನೆ.

ಸಂತಾಪ ಸೂಚನೆಯಲ್ಲಿ ದಿವಂಗತ ನಟ ಲೋಕನಾಥ್‌ರವರ ಬಗ್ಗೆಯೂ ಸಹ ಉಲ್ಲೇಖ ಮಾಡಲಾಗಿದೆ. ಅವರೊಬ್ಬ ಶ್ರೇಷ್ಠ ಹಾಗೂ ಪೋಷಕ ನಟರಾಗಿದ್ದರು. ಇದರ ಜೊತೆಗೆ ಅವರಿಗೆ ನಟನೆಯಲ್ಲಿದ್ದ ಶ್ರದ್ಧೆ ಅತ್ಯಂತ ಅದ್ಭುತವಾಗಿತ್ತು. ಮಾನ್ಯ ಸಭಾನಾಯಕರು ಉಲ್ಲೇಖಿಸಿದಂತೆ, ಅವರು 'ಭೂತಯ್ಯನ ಮಗ ಅಯ್ಯು' ಚಿತ್ರದಲ್ಲಿ ಉಪ್ಪಿನಕಾಯಿಯ ಭರಣಿಯನ್ನು ತೆಗೆದುಕೊಂಡು ಬಂದ ರೀತಿಯನ್ನು ನಾನು ನೋಡಿದ್ದೇನೆ. ಸದರಿ ಚಿತ್ರದಲ್ಲಿ ಒಂದು ಕಡೆ ಗುಳ್ಳ ಮತ್ತೊಂದೆಡೆ ಅಯ್ಯು. ಒಂದೇ ಊರಿನಲ್ಲಿ ಒಂದಿಷ್ಟು ಸಂಘರ್ಷಗಳು, ಗಲಾಟೆಗಳು ಮತ್ತು ವಾದಗಳು ನಡೆದ ಸಂದರ್ಭ ಇತ್ತು. ಆ ಪೈಕಿ ಒಂದು ಗುಂಪಿನವರ ಕೈ ಮೇಲಾಗಿ ಅವರುಗಳೆಲ್ಲರೂ ಅಯ್ಯು ಮನೆಗೆ ನುಗ್ಗಿಕೊಂಡು ಹೋಗಿ, ಅಲ್ಲಿದ್ದ ಎಲ್ಲಾ ವಸ್ತುಗಳನ್ನು ತೆಗೆದುಕೊಂಡು ಹೋಗುತ್ತಾರೆ. ಅವತ್ತಿನ ಕಾಲ ಘಟ್ಟದಲ್ಲಿ ಪರಿಸ್ಥಿತಿಯೂ ಸಹ ಹಾಗೆ ಇರಬಹುದು. ಕೊನೆಗೆ ಗುಳ್ಳ ಪಾತ್ರಧಾರಿಗೆ ಉಪ್ಪಿನಕಾಯಿಯ ಭರಣಿಯು ಸಿಗುತ್ತದೆ. ನಂತರದಲ್ಲಿ ಎಲ್ಲಾ ಜನರ ಬುದ್ಧಿ ಹಾಗೂ ಮನೋಭಾವನೆಗಳು ಬದಲಾಗಿ, ಆ ಊರಿನಲ್ಲಿ ನೆಮ್ಮದಿಯುಂಟಾಗುತ್ತದೆ. ಆಗ ಜನರೆಲ್ಲರೂ ತಾವು ತೆಗೆದುಕೊಂಡು ಹೋಗಿದ್ದ ಅಥವಾ ದರೋಡೆ ಮಾಡಿದಂತಹ ವಸ್ತುಗಳನ್ನು ಹಿಂದಿರುಗಿಸಿರುತ್ತಾರೆ. ಆ ಸಂದರ್ಭದಲ್ಲಿ ಪಾತ್ರಧಾರಿ ಲೋಕನಾಥ್‌ರವರು ಜನರೆಲ್ಲರೂ ತಾವು ತೆಗೆದುಕೊಂಡು ಹೋಗಿದ್ದ ವಸ್ತುಗಳನ್ನು ವಾಪಸ್ಸು ನೀಡಿದ್ದಾರೆ, ಆದರೆ ನನ್ನಿಂದ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತಪ್ಪಾಗಿದೆ ಏಕೆಂದರೆ, ನಾನು ಉಪ್ಪಿನಕಾಯಿಯನ್ನು ತಿಂದಿದ್ದೇನೆ. ಹೀಗಾಗಿ ಅದನ್ನು ಹಿಂದಿರುಗಿಸಲು ನನ್ನ ಬಳಿ ಉಪ್ಪಿನಕಾಯಿ ಇಲ್ಲ ಎಂಬುದಾಗಿ ಹೇಳುತ್ತಾರೆ. ಅವರ ನಟನೆಯ ನೈಜತೆ ಅತ್ಯಂತ ಅರ್ಥಪೂರ್ಣವಾಗಿದೆ. ಅತ್ಯಂತ ಶ್ರೇಷ್ಠವಾದ ನಟ ಅವರಾಗಿದ್ದರು.

ಇವತ್ತಿನ ದಿವಸ ಮೂವರು ಹಿರಿಯರಿಗೆ ಸಂತಾಪವನ್ನು ಸಲ್ಲಿಸಿದ್ದು, ಅದಕ್ಕೆ ನನ್ನ ಸಹಮತವನ್ನು ವ್ಯಕ್ತಪಡಿಸುತ್ತೇನೆ. ಅಗಲಿದ ಗಣ್ಯರಿಗೆ ಶ್ರದ್ಧಾಂಜಲಿಯನ್ನು ಕೋರುತ್ತೇನೆ.

**ಸಭಾಪತಿಯವರು:-** ಮೃತರುಗಳ ಆತ್ಮಕ್ಕೆ ಸದ್ಗತಿಯನ್ನು ಕೋರುತ್ತಾ, ಅವರ ಅಗಲಿಕೆಯ ನೋವನ್ನು ಸಹಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ಪರಮಾತ್ಮನು ಕರುಣಿಸಲೆಂದು ಪ್ರಾರ್ಥಿಸುತ್ತೇನೆ.

ಮೃತರುಗಳ ಗೌರವಾರ್ಥ ಮಾನ್ಯ ಸದಸ್ಯರುಗಳು ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

**(ಮೃತರ ಗೌರವಾರ್ಥ ಸದನದ ಎಲ್ಲಾ ಸದಸ್ಯರು ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಿದರು)**

**ಸಭಾಪತಿಯವರು:-** ಈ ಸದನವು ಅಂಗೀಕರಿಸಿದ ಸಂತಾಪ ಸೂಚಕ ನಿರ್ಣಯವನ್ನು ಮೃತರ ಕುಟುಂಬ ವರ್ಗದವರಿಗೆ ಕಳುಹಿಸಿಕೊಡಲಾಗುವುದು.

ಈಗ ಸಭೆಯು ಮುಕ್ತಾಯವಾಗಿ ಪುನಃ ದಿನಾಂಕ 07ನೇ ಫೆಬ್ರವರಿ ಮಾಹೆ 2019ರ ಗುರುವಾರದಂದು ಬೆಳಿಗ್ಗೆ 10:30 ಗಂಟೆಗೆ ಸೇರುವುದು.

**(ಸದನವು ಅಪರಾಹ್ನ 12 ಗಂಟೆ 35 ನಿಮಿಷಕ್ಕೆ ಮುಕ್ತಾಯಗೊಂಡು, ಪುನಃ ದಿನಾಂಕ 7ನೇ ಫೆಬ್ರವರಿ ಮಾಹೆ 2019ರ ಗುರುವಾರದಂದು ಬೆಳಿಗ್ಗೆ 10:30 ಗಂಟೆಗೆ ಸೇರಲು ನಿಶ್ಚಯಿಸಿತು)**

-----

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"